# ನಾ ಕಂಡಂತೆ ನನ್ನ ತಂದೆ

ಶಾಂತಸ್ವಾಮಿ (ನಾಗಸುತೆ)



# ನಾ ಕಂಡಂತೆ ನನ್ನ ತಂದೆ

ಶಾಂತ ಸ್ವಾಮಿ(ನಾಗಸುತೆ)

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪

**Na Kandanrthe Nanna Tande**- By **Shantha Swamy** Published by **Karnataka Janapada Parishath,** No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054,
Phone : 080-23605033. Janapada Loka : 27201143.

ಪ್ರಥಮ ಮುದ್ರಣ : ೨೦೧೨ ಪುಟಗಳು : ೩೨

ಪ್ರತಿಗಳು : ೧೦೦೦

ಬೆಲೆ : **ರೂ. ೨೦** (ಇಪ್ಪತ್ತು ರೂಪಾಯಿಗಳು)

**ಹಕ್ಕುಗಳು : ಲೇಖಕರಿಗೆ ಸೇರಿವೆ**

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ಶ್ರೀ ಟಿ. ತಿಮ್ಮೇಗೌಡ** | ಅಧ್ಯಕ್ಷರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ॥ ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ॥ ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಸಹಸಂಪಾದಕರು |
| **ಡಾ. ರಾಜೇಗೌಡ ಹೊಸಹಳ್ಳಿ** | ಗೌರವ ಕಾರ್ಯದರ್ಶಿ |

ಮುದ್ರಕರು :

**ಚಂದನ ಪ್ರಿಂಟರ್ಸ್**
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ- ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು-ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಶ್ರೀಮತಿ ಶಾಂತಸ್ವಾಮಿ** ಅವರು **ತಮ್ಮ ತಂದೆ ಎಚ್. ಎಲ್. ನಾಗೇಗೌಡರ ಬಗ್ಗೆ 'ನಾ ಕಂಡ ನನ್ನ ತಂದೆ'** ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟಣ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಟಿ. ತಿಮ್ಮೇಗೌಡ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೨೫-೦೪-೨೦೧೨

# ನಾ ಕಂಡಂತೆ ನನ್ನ ತಂದೆ

## ಜಾನಪದ ಪಿತಾಮಹನಿಗೊಂದು ನೆನಪಿನಣತೆಯ ಕಿರುಸೊಡರು

ಈ ಹಣತೆಯ ಬೆಳಕು ಪಸರಿಸಿದಂತೆ ಬೆಳಕಿನ ಹಿಂದಿದ್ದ ಕತ್ತಲೆಯ ಮನದಾಳಕ್ಕೆ ಮನ ಇಳಿಯುತ್ತದೆ. ನೆನಪಿನ ದೋಣಿಯಲ್ಲಿ ಹಿಂದೆ ಹಿಂದೆ ಸಾಗುತ್ತದೆ. ಈ ನಾಲ್ಕು ವರ್ಷದ ಹಿಂದೆ ನಡೆದ ಒಂದು ಕಾರ್ಯಕ್ರಮದಲ್ಲಿ ನಿಮ್ಮ ತಂದೆಯವರ ಬಗ್ಗೆ ನಿಮ್ಮಲ್ಲಿರುವ ಭಾವನೆ ಮತ್ತು ಅನಿಸಿಕೆಗಳ ಬಗ್ಗೆ ಕೆಲವು ಮಾತುಗಳನ್ನಾಡಿ ಎಂದು ನನ್ನ ಅತ್ತೆಯ ಮಗಳಾದ (ನನ್ನ ತಂದೆಯ ತಂಗಿ ಮಗಳಾದ) ಶ್ರೀಮತಿ ಸರಸ್ವತಿಯವರು ಹೇಳಿದರು. ಅದೇ ಮೊದಲ ಬಾರಿ ಬರೆಯಲು ಕುಳಿತೆ. ಏನಾದರೂ ಬರೆಯಬೇಕೆಂಬ ತುಡಿತ ಬಹಳ ವರ್ಷಗಳಿಂದ ಇತ್ತು. ಆದರೆ ಇದಕ್ಕೆ ನನ್ನ ತಂದೆಯೇ ಈ ಲೇಖನದ ಬರವಣಿಗೆಗೆ ಮೂಲ ಕಾರಣ ಮತ್ತು ಪ್ರೇರಣೆಯಾಗ ಬಹುದೆಂದು ನಾನು ಕನಸಿನಲ್ಲೂ ನೆನೆನದಿರಲಿಲ್ಲ. ಆಗಿನ ಮಟ್ಟಿಗೆ ಒಂದೆರಡು ಗಂಟೆಗಳಲ್ಲೇ ಬರೆದು ಮಾತಾಡಿದ್ದಾಯಿತು. ಹೇಗೆ ಪ್ರಾರಂಭಿಸಲಿ? ಯಾವುದು ಬರೆಯುವುದು ಎಂದು ಕುಳಿತಾಗಲೆಲ್ಲ ನೆನಪುಗಳ ಮಹಪೂರವೇ ಹರಿದು ಬರುತ್ತಿತ್ತು. ಅದರೆ ಕಾಗದದ ಮೇಲೆ ಇಳಿಯುತ್ತಿದ್ದುದು ಬಹಳ ಸ್ವಲ್ಪ ಮಾತ್ರ. ಇದಕ್ಕೆ ಜ್ಞಾನಿಗಳು ಹೇಳುವುದು ಮನೋ ವೇಗಕ್ಕಿಂತ ಮಿಗಿಲಲ್ಲ ಎಂದು. ಮನಸ್ಸಿನ ವೃತ್ತಿಗಳು ಸೂಕ್ಷ್ಮ, ಅಷ್ಟೇ ತೀಕ್ಷ್ಣ. ಇದರ ಅಧೀನಕ್ಕೇನಾದರೂ ಸಿಕ್ಕಿ ಇದಕ್ಕೊಂದು ಲೇಖನಿ

ಇದ್ದಿದ್ದರೆ ಏನೇನು ಬರೆಯುತ್ತಿತ್ತೋ? ಇದರ ಯೋಚನೆ ಆಸೆಗೊಂದು ಇತಿಮಿತಿ ಇಲ್ಲ, ಮೇರೆ ಇಲ್ಲ ಒಳ್ಳೆಯದು, ಕೆಟ್ಟದ್ದು, ನಡೆದದ್ದು, ನಡೆಯಬಾರದ್ದು ಅಂತರಿಕವಾಗಿ ಎಲ್ಲ ನಡೆದು ಹೋಗುತ್ತದೆ. ಮನಬಂದಂತೆ ವ್ಯವಹರಿಸುತ್ತಾ ರೀತಿ ನೀತಿ, ನಿಯಮ, ಸಂಯಮ, ಯಾವ ಕಡಿವಾಣವಿಲ್ಲದ ಲಂಗು ಲಗಾಮಿಲ್ಲದ ಹುಚ್ಚು ಕುದುರೆಯಂತೆ. ಇದನ್ನು ನಿಯಂತ್ರಣದಲ್ಲಿಟ್ಟು ಕೊಳ್ಳುವುದು ಬಹಳ ಕಷ್ಟ. ಕವಿ ನುಡಿ ಅದೆಷ್ಟು ಸತ್ಯ 'ಕಡಲಿನಾಳವೆ ಮಿಗಿಲು, ಕಡಲಿಗಿಂತಲೂ ಮಿಗಿಲು ಮನಸಿನಾಳ', ಮನಸಿನಾಳವನ್ನು ಅರಿತವರಾರಿಲ್ಲ ಈ ಮನಸಿನಾಳದಿಂದ ಬಂದ ಭಾವನೆ, ಕಲ್ಪನೆ, ಅನಿಸಿಕೆ, ಕಾವ್ಯ, ಕವನ, ಕಾದಂಬರಿ, ಸಾಹಿತ್ಯದಲ್ಲಿ ಮೂಡಿ ಬರುವುದು ಕವಿಗಳಿಗೆ ಮಾತ್ರ. ಅಂತವರಲ್ಲಿ ನನ್ನ ತಂದೆಯೂ ಅಸಮಾನ್ಯರು. ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿ ವಿಜೇತ ಶ್ರೀ. ಕುವೆಂಪುರವರ ಪ್ರಾರ್ಥನೆಯಂತೆ "ಮುಚ್ಚುಮರೆ ಇಲ್ಲದೆಯೇ ನಿನ್ನ ಮುಂದೆಲ್ಲವನು ಬಿಚ್ಚಿಡುವೆ ಓ ಗುರುವೆ ಅಂತರಾತ್ಮ. ಪಾಪವಿದೆ ಪುಣ್ಯವಿದೆ, ನರಕವಿದೆ ನಾಕವಿದೆ, ಸ್ವೀಕರಿಸು ಓ ಗುರುವೇ ಅಂತರಾತ್ಮ". ಮನಸ್ಸು ಮಾಡುವ ಪಾಪ ಪುಣ್ಯಗಳೆಲ್ಲಕ್ಕೂ ಅವರಂತರಾತ್ಮವೆ ಸಾಕ್ಷಿ, ಬೇಗ ಕಲುಷಿತ ಗೊಳ್ಳುವುದೆಂದರೆ ಈ ಮನಸ್ಸು ಈ ಮನಸಿನಾಳದಿಂದ ಬಂದ ಅನಿಸಿಕೆ, ಭಾವನೆ ಕಲ್ಪನೆಗಳಿಗೆಲ್ಲ ಇಂಬು ಕೊಟ್ಟು ಕಾಗದದ ಮೇಲೆ ಹರಿದಿದ್ದು ಇವರ ಲೇಖನಿಯಿಂದ ಮಾತ್ರ. ಇವರ ಕಲ್ಪನೆಯ ಕನಸೆಲ್ಲ ನನಸಾಗಿಸಿದ್ದು ಇವರ ಸಾಹಿತ್ಯ, ಕವಿತೆ, ಕವನದಲ್ಲಿ, ಜಾನಪದ ಲೋಕದಲ್ಲಿ. ಯಾವುದೇ ಅಮಿಷ ಆಡಂಬರಕ್ಕೂ ಬಲಿಯಾಗದೇ ಮನಕ್ಕೆ ಕಡಿವಾಣ ಹಾಕಿ ನಿಯಂತ್ರಿಸಿ ತನ್ನದೇ ಜಾಡಿನಲ್ಲಿ ಜರುಗಿದ ಜನಪದ ಜಂಗಮನ ಜೀವನಗಾಥೆ. ಇದಕ್ಕೆ ಹಿಂದಿನ ಸಂಸ್ಕಾರವಿರಬೇಕು, ಹಾಗು ತಾಯಿ ಶಾರದೆಯ ವರವಿರಬೇಕು, ಪ್ರೀತಿಯ ತಂದೆಯಾಗಿ ನಮ್ಮೆಲ್ಲರ ಬಾಳಿಗೆ ದಾರಿ ದೀಪವಾಗಿ ಅಧಿಕಾರಿ, ಸಾಹಿತಿ, ಜಾನಪದ ತಜ್ಞ, ಸಂಶೋಧಕ

ಹಾಗೂ ಜಾನಪದ ಲೋಕದ ರೂವಾರಿಯಾಗಿ ಹೇಗೆ ಈ ಬಹುಮುಖಿ ಪ್ರತಿಭೆಯುನ್ನು ಬೆಳೆಸಿ ತಮ್ಮ ಜೀವನದ ಸಾರ್ಥಕತೆಯುನ್ನು ಕಂಡುಕೊಂಡರೆಂದರೆ ಇದು ಯಾವುದೋ ಜನ್ಮದ ಪುಣ್ಯ ಸಂಚಯ ವಿರಬೇಕು. ಸಾವನ್ನಪ್ಪಿದ್ದು ಅವರ ಭೌತಿಕ ಶರೀರ ಮಾತ್ರ ಆದರೆ ಆ ಜೀವಾತ್ಮನ ಚೇತನದ ಸಾಧನೆ ಎಂದೆಂದಿಗೂ ಅಮರ. ತನ್ನತನ, ಅಸ್ತಿತ್ವದ, ವ್ಯಕ್ತಿತ್ವದ ಇರುವಿನ ಕನ್ನಡಿ ಈ ಜಾನಪದ ಲೋಕ.

ರಸ ಋಷಿಯ ಪ್ರಾರ್ಥನೆಯಂತೆ ಈ ಚೇತನದ ಅಮರ ಯಾತ್ರೆ 'ಓ ನನ್ನ ಚೇತನ, ಆಗು ನೀ ಅನಿಕೇತನ, ಎಲ್ಲಿಯೂ ನಿಲ್ಲದಿರು, ಮನೆಯನೆಂದೂ ಕಟ್ಟದಿರು, ಕೊನೆಯನೆಂದು ಮುಟ್ಟದಿರು ಓ ಅನಂತ, ಅನಂತವಾಗಿರು, ಓ ನನ್ನ ಚೇತನ'..... ಈ ಪ್ರಾರ್ಥನೆಯ ಒಂದೊಂದು ಪದದ ಅರ್ಥವನ್ನು ಇವರ ಜೀವನದುದ್ದಕ್ಕೂ ತಮ್ಮ ಬಾಳಿನಲ್ಲಿ ಅಳವಡಿಸಿಕೊಂಡೇ ಬಂದರು. ಕಾಯಕ್ಕೆ ಅಳಿವುಂಟು ಆತ್ಮಕ್ಕೆ ಅಳಿವಿಲ್ಲ. ಆತ್ಮನ ಸಾಕ್ಷಾತ್ಕಾರಕ್ಕೆ ಕಾಯ ಒಂದು ಸಾಧನ. ಶರೀರಕ್ಕೆ ಮುಪ್ಪಡರಿತ್ತೆ ಹೊರತು ಅತ್ಮ ಮಾತ್ರ ಚಿರನೂತನ. ಲಕ್ಷ್ಮೀಯ ಆರಾಧನೆಗಿಂತ ತಾಯಿ ಶಾರದೆಯ ಸೇವೆಗೆ ಹೆಚ್ಚು ಮಹತ್ವ, ಸತ್ಯದ ಹಾದಿಯಲ್ಲೆ ನಡೆದ ಇವರನ್ನು ಜೀವನವೇ ಮುನ್ನಡೆಸಿತು. ಸಕಾರಾತ್ಮಕ ಚಿಂತನೆ, ಸಹಜ ಜೀವನ, ಒಳ್ಳೆಯ ಆಹಾರ, ಒಳ್ಳೆಯ ವಿಚಾರ. ನಿರ್ಮಲ ಮನಸ್ಸು, ದೈಹಿಕ ದುಡಿತ, ವ್ಯಾಯಾಮ, ಬದುಕಿನ ಅನಂತ ಕೃಪೆಯ ಬಗ್ಗೆ ಇದ್ದ ತೃಪ್ತಿ, ಇವರ ಸ್ವಾಸ್ಥ್ಯದ ಯಶಸ್ಸಿನ ಗುಟ್ಟು. ಇವರಿಗೆ ಸಂದ ಪ್ರಶಸ್ತಿಗಳೇನು ಒಂದೇ ಎರಡೇ 1974 ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಧ್ಯಕ್ಷರಾಗಿ ಆರು ವರ್ಷ, ಹಾಗೂ ಅಕಾಡೆಮಿ ಪ್ರಶಸ್ತಿ ಕೂಡಾ. ವಿಧಾನ ಪರಿಷತ್ತಿನ ಸದಸ್ಯರಾಗಿ ನಾಮಕರಣ, ರಾಜ್ಯ ಸರ್ಕಾರದ ಅತ್ಯಂತ ಶ್ರೇಷ್ಠ ಸಾಹಿತ್ಯ "ಪಂಪ" ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯ ನೀಡಿದ ಅತ್ಯುನ್ನತ 'ನಾಡೋಜ' ಪ್ರಶಸ್ತಿ. ಮುಧೋಳದಲ್ಲಿ

ನಡೆದ 64ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಆಯ್ಕೆ. ಇದಲ್ಲದೆ 'ಜಾನಪದ ಭೀಷ್ಮ', 'ಪಿತಾಮಹ', 'ಜಾನಪದ ಮೇರು', ಮತ್ತು ಆದಿ ಚುಂಚನಗಿರಿ ಶ್ರೀ ಕ್ಷೇತ್ರದಿಂದ "ಚುಂಚಶ್ರೀ ಪ್ರಶಸ್ತಿ" ಪ್ರೇರಣಾ, ಇನ್ನು ಅನೇಕ ಪ್ರಶಸ್ತಿಗಳ ಸರಮಾಲೆಯೇ ಇದೆ. ಇದೆಲ್ಲ ಆ ದೇವಿ ಸರಸ್ವತಿಯ ವರದಾನವೇ ಸರಿ.

ಇನ್ನು ಇವರ ಸಾಹಿತ್ಯ ಸಂಪದವು ಅಪಾರ. 'ಪ್ರವಾಸಿ ಕಂಡ ಇಂಡಿಯಾ' ಎಂಟು ಮಹಾ ಸಂಪುಟಗಳು (ಅನುವಾದ), ಸರೋಜಿನಿ ದೇವಿ, ದೊಡ್ಡಮನೆ (ಕಾದಂಬರಿ)  ನನ್ನೂರು (ಕಾದಂಬರಿ)ಭೂಮಿಗೆ ಬಂದ ಗಂಧರ್ವ (ಶ್ರೀ ಭೈರವಿ ಕೆಂಪೇಗೌಡರ ನಿಜ ಜೀವನ ಕಥೆ) ಕಂಡು ಕೇಳಿದ ಕಥೆಗಳು, ಹೆಳವರು ಮತ್ತು ಅವರ ಕಾವ್ಯಗಳು, ಕಥೆವ್ಯೆಥೆ, ಹಾಡನ ಬನ್ನಿ ಧನಿ ಎತ್ತಿ, ಗ್ರಾಮದೇವತೆ ಮಾರಮ್ಮ, ಮಾರ್ಕೋಪೋಲೊ ಪ್ರವಾಸ ಕಥನ (ಅನುವಾದ), ವೆರಿಯರ್ ಎಲ್ವಿನ್‌ನ ಗಿರಿಜನ ಪ್ರಪಂಚ (ಅನುವಾದ), ಸೊನ್ನೆಯಿಂದ ಸೊನ್ನೆಗೆ (ಕೇಳಿದ ಕಥೆಗಳು), ಕೆನಿಲ್ ವರ್ತ್ (ಅನುವಾದ), ನಾನಾಗುವೆ ಗಿಜಗನ ಹಕ್ಕಿ (ಕವನ ಸಂಕಲನ) ಬೆಟ್ಟದಿಂದ ಬಟ್ಟಲಿಗೆ (ಕಾಫಿಕತೆ), ಸೋಬಾನೆ ಚಿಕ್ಕಮ್ಮನ ಪದಗಳು, ಪದವವೆನ್ನಮ್ಮ ಎದೆಯಲ್ಲಿ (ಜಾನಪದ ಗೀತ ಸಂಕಲನ), ನಾಗಸಿರಿ, ನಾಗಸಂಪಿಗೆ (ಆತ್ಮ ಕಥನ) ಮೈಲಾರ ಲಿಂಗನ ಕಾವ್ಯ, ಹಾವು ತುಳಿದೇನೇ, ಮತ್ತು ಇದಲ್ಲದೆ ಸಾವಿರ ಪುಟಗಳ ಜಾನಪದ ಕೋಶ ( ಇದು ಜಾನಪದಕ್ಕೆ ಮೀಸಲಾದ ನಿಘಂಟು) ಜಾನಪದ ಲೋಕ, ಜಾನಪದ ಸಿರಿಭುವನ, ಜಾನಪದ ವಸ್ತು ಸಂಗ್ರಹಾದಿ ಮಾಯಲೋಕ, Essentials of Karnataka Folklore. ನಾ ಕಂಡ ಪ್ರಪಂಚ (ಅಮೇರಿಕ ಪ್ರವಾಸ ಕಥನ) ಕುವೆಂಪು ಕಂಡ ಕಾಡು, ನಾ ಕಂಡ ಕುವೆಂಪು ಎರಡು ಸುದೀರ್ಘ ಲೇಖನಗಳನ್ನೊಳಗೊಂಡ "ಮಲೆನಾಡ ವಾಲ್ಮೀಕಿ" ಎಂಬ ಕೃತಿ ಇದು. ಇವರ ಮತ್ತು ವರಕವಿ, ಕುವೆಂಪುರವರ ನಡುವೆ ಇದ್ದ ಭಾವನಾತ್ಮಕ

ಸಂಬಂಧ ಹಾಗೂ ವಿಚಾರ ಧಾರೆಯನ್ನು ಪರಿಚಯಿಸುತ್ತದೆ. 'ಪ್ರವಾಸಿ ಕಂಡ ಇಂಡಿಯಾ'ವನ್ನು ಕುರಿತು ಶ್ರೀ. ಕುವೆಂಪು ಹೀಗೇ ಬರೆದಿರುತ್ತಾರೆ. "ಈ ಕೃತಿ ನಾಗೇಗೌಡರ ವಿದ್ವತ್ತಿಗೂ ಹಾಗೂ ಅವರ ಅನುಪಮ ಸಾಹಸಕ್ಕೆ ಕನ್ನಡಿಯಾಗಿದ್ದು ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ಕೊಡುಗೆಯಾಗಿದೆ. ಸುಮಾರು ಒಂದೂವರೆ ಸಾವಿರ ವರ್ಷಗಳ ಬಹು ವರ್ಣರಂಜಿತವೂ ನಾನಾ ವಿಧ ಮನೋಧರ್ಮ, ಸಂಪ್ರದಾಯ, ಸಮೃದ್ಧವೂ ಆದ ಭಾರತೀಯ ಜೀವನದ ಇತಿಹಾಸದ ಪುನರ್ ಸೃಷ್ಟಿ ಇಲ್ಲಿ ನಡೆದಿದೆ. ಇತಿಹಾಸಕರರಿಗೆ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೃಷಿ ಮಾಡುವವರಿಗೆ, ಸಮಾಜ ಹಾಗೂ ಜನಾಂಗ ವಿಜ್ಞಾನಗಳಿಗೆ, ಜಾನಪದ ವಿದ್ವಾಂಸರಿಗೆ ಇದೊಂದು ತವನಿದಿ ರೂಪದ ಆಕರ ಗ್ರಂಥವಾಗಿದೆ. ಸೀಮಾ ಕೃತಿಯಂತಿರುವ ಈ ಅಮೂಲ್ಯ ಗ್ರಂಥ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸುತ್ತದೆ. ಈಗ ಅಧಿಕಾರದಿಂದ ನಿವೃತ್ತರಾಗಿರುವ ಶ್ರೀ ನಾಗೇಗೌಡರು ಸಾಹಿತ್ಯೋಪಾಸನೆಯಲ್ಲಿ ಸದಾ ಪ್ರವೃತ್ತರಾಗಿ ಸರಸ್ವತಿಯ ಕೈಂಕರ್ಯಕ್ಕಾಗಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ನಿವೇದಿಸಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಹುಲುಸುಗೊಳಿಸಲೆಂದು ಭಗವಂತ ಅವರಿಗೆ ಆಯುರಾರೋಗ್ಯಾಧಿ ಭಾಗ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ." ಇದು ಕನ್ನಡದ ಮೇರುಕವಿ ಹರಸಿದ ಮೇಲ್ಮೆ

ಇಂಥಾ ಕನ್ನಡದ ಮಣ್ಣಿನ ಮಗನು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಹೆರಗನಹಳ್ಳಿಯಲ್ಲಿ ದೊಡ್ಡಮನೆಯ, ದೊಡ್ಡ ಮಗನಾದ ಶ್ರೀ ಲಿಂಗೇಗೌಡರಿಗೆ, ದೊಡ್ಡ ಮಗನಾಗಿ ಜನಿಸಿದರು. (11–02–1916) ಶ್ರೀ ಹೆಚ್. ಎಲ್. ನಾಗೇಗೌಡರು. ಗುಣ, ಸಂಸ್ಕೃತಿ, ಗೌರವ ಅಲ್ಲಿ ವಾಸಿಸುತ್ತಿದ್ದ ಮಂದಿಯ ಸಂಖ್ಯಾಬಲದಿಂದ ಅದು ದೊಡ್ಡ ಮನೆಯೇ ಆಗಿತ್ತು. ಇವರ ಬಾಲ್ಯ ಹೂವಿಗಿಂತ ಕಲ್ಲು ಮುಳ್ಳೆ ಜಾಸ್ತಿ. ಎಲ್ಲವನ್ನು 'ನನ್ನೂರು', 'ದೊಡ್ಡ ಮನೆ', 'ನಾಗಸಿರಿ', 'ನಾಗಸಂಪಿಗೆ', (ಆತ್ಮಕಥೆ)ಯಲ್ಲಿ ಮನಮುಟ್ಟುವಂತೆ ಬರೆದಿದ್ದಾರೆ. ಮೂಲತಃ ಕಲಿತದ್ದು ವಿಜ್ಞಾನ ಮತ್ತು ನ್ಯಾಯ ಶಾಸ್ತ್ರ,

ಸೇರಿದ್ದು ಆಡಳಿತ ಕ್ಷೇತ್ರ, ಬದಿಯಲ್ಲಿಯೆ ಬೆಳದು ಬಂತು ಸಾಹಿತ್ಯ ಹಾಗೂ ಬರವಣಿಗೆ. ನರಸಿಂಹರಾಜುಪುರದಲ್ಲಿ ಹೆಡ್‌ಮುನ್ಷಿಯಾಗಿ 50ರೂ ಸಂಬಳಕ್ಕೆ ಸೇರಿದರು. 1941ರ ಸಿವಿಲ್ ಸರ್ವೀಸ್ ಸ್ಪರ್ಧಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಗೆಜೆಟೆಡ್ ಹುದ್ದೆಗೆ ಆಯ್ಕೆಯಾಗಿ, ಐ.ಎ.ಎಸ್. ಅಧಿಕಾರಿಯಾಗಿ 1979ರಲ್ಲಿ ರಾಜ್ಯ ಲೋಕಸೇವಾ ಆಯೋಗದ ಸದಸ್ಯತ್ವದಿಂದ ನಿವೃತ್ತರಾಗುವವರೆಗೂ ಹಿಂದುರುಗಿ ನೋಡದ ಸರ್ಕಾರಿ ಸೇವೆಯ ದುಡಿಮೆ. 4 ವರ್ಷಗಳ ಲೋಕಸೇವಾ ಸದಸ್ಯತ್ವದ ಅವಧಿಯಲ್ಲಿ ಗ್ರಾಮೀಣ ಬದುಕಿನ ಕಷ್ಟವನ್ನುಂಡು ಇವರು ಸಾವಿರಾರು ಗ್ರಾಮೀಣ ಅಭ್ಯರ್ಥಿಗಳಿಗೆ ಎಲ್ಲಾ ಇಲಾಖೆಯಲ್ಲೂ ಉದ್ಯೋಗವನ್ನು ನಿರ್ವಂಚನೆಯಿಂದ ನಿಷ್ಪಕ್ಷಪಾತವಾಗಿ ಉದ್ಯೋಗ ಕಲ್ಪಿಸಿದ್ದು ಚರಿತ್ರೆ. ದಕ್ಷ ಆಡಳಿತಗಾರರಾದ ಇವರು ಉನ್ನತ ಹುದ್ದೆಗೆ ಬಂದರೂ ತಮ್ಮ ಕರ್ತವ್ಯ ನಿಷ್ಠೆ, ಸಮಯಪ್ರಜ್ಞೆ, ಸತ್ಯತೆ, ಶಿಸ್ತು ಮತ್ತು ಮಾನವೀಯತೆ ಮೈಗೂಡಿಸಿಕೊಂಡ ಚೇತನ. ತನ್ನ ಅಂತರಾತ್ಮದ ಸಾಕ್ಷಿಯಾಗಿ ನಡೆಸಿದ ಬದುಕು. ಇದು ಈ ಜಾನಪದ ಜಂಗಮ ಜಾಡು.

ನನ್ನ ತಾತನವರಾದ ಪಿತಾಮಹಾ ದೊಡ್ಡ ಮನೆ ಲಿಂಗೇ ಗೌಡರು ತಮ್ಮ ಮಗನಿಗೆ ತಕ್ಕ ವಧುವನ್ನು ತರಬೇಕೆಂದು ಬಹಳ ಹುಡುಕಿ ತಂದ ಸೊಸೆ ಲಕ್ಷ್ಮಮ್ಮ. ಲಕ್ಷಣ ಗುಣದಲ್ಲಿ ಲಕ್ಷ್ಮಿಯಾಗಿ ಮನೆ ಮನ ತುಂಬಿ ಬಂದ ಸೊಸೆ. ನನ್ನ ತಾತನವರದು 70 ವರ್ಷದ ಹಿಂದೆಯೂ ಜ್ಯೋತಿಷ್ಯ ಶಾಸ್ತ್ರ ಜಾತಕಗಳಲ್ಲಿ ನಂಬಿಕೆ ಇದ್ದಂತ ಸಂಪ್ರದಾಯ. ಹೀಗೆ ನಾನಾ ವಿದದ ಪರೀಕ್ಷೆಗಳಲ್ಲೂ ಉತ್ತೀರ್ಣರಾಗಿ ನನ್ನ ತಂದೆಯ ಕೈ ಹಿಡಿದುಬಂದವರು. ನನ್ನ ತಾತನವರು ಮಾಡಿಸಿದ ಇವರಿಬ್ಬರ ಜಾತಕಗಳ ಜೋಡಣೆ ಮತ್ತು ಗಣ ಕೂಟಗಳ ಲೆಕ್ಕಾಚಾರದ ಪ್ರತಿ ತಂದೆಯ ಹತ್ತಿರ ಇತ್ತು. ಹೀಗೆ ಕೂಲಿ ಮಠದಿಂದಲೇ ಪ್ರಾರಂಭ ಈ ಜ್ಯೋತಿಷ್ಯ ಜ್ಞಾನ.

ಸುಮಾರು 60 ವರ್ಷಗಳ ಹಿಂದಿರಬಹುದು ಯಾವ ಊರ ಹಬ್ಬವಾಗಲಿ ಮದುವೆ, ಪಕ್ಷ ಹೀಗೆ ನಾವು ಸಾಕಷ್ಟು ಬಾರಿ ನನ್ನ ತಂದೆಯ ತವರೂರಾದ ಹೆರಗನಹಳ್ಳಿಗೆ ಹೋಗುತ್ತಿದ್ದೆವು. ಈಗಾಗಲೇ 93 ವರ್ಷತುಂಬಿದ ಆ ದೊಡ್ಡ ಮನೆಗೆ ತಕ್ಕ ಹಾಗೆಯೇ ದೊಡ್ಡ ಅವಿಭಕ್ತ ಕುಟುಂಬ ನನ್ನ ತಾತಂದಿರು ಒಟ್ಟಿಗೆ ಕೂಡಿ ಬಾಳಿ ಬದುಕಿದ ಮನೆ. ಊರಿಗೆ ಬರುವಾಗ ಸಂಜೆಯಾಗುತ್ತಿತ್ತು. ದೊಡ್ಡ ಮನೆ ಬಾಗಿಲಿಗೆ ಬರುವವರೆಗೂ ನಾನಾ ವಿದಧ ಹಳ್ಳಿಯ ಸೊಗಡುಗಳು ಸಗಣಿ ಧೂಳಿನ ಕಂಪು, ವಿವಿಧ ಸಾರುಗಳ ಘಮ, ರಾಗಿ ಹಿಟ್ಟು ಬೇಯಿಸುವ ಸೊಗಡು. ಹೊಲಗೆಲಸ ಮುಗಿಸಿ ಬರುವವರು ಹಾಗೇ ಬರಿ ಗೈಯಲ್ಲಿ ಬರದೇ ಕಾಯಿ ಕಬ್ಬು ಹುಲ್ಲಿನ ಹೊರೆ ಕೈಯಲ್ಲಿ ಎತ್ತುಗಳು. ಅದು ಮರೆಯಲಾಗದ ಮನದಲ್ಲಿ ಅಚ್ಚೊತ್ತಿದ ಗ್ರಾಮೀಣ ಬದುಕಿನ ಸೊಬಗು ಸೊಗಡು ತುಂಬಿದ ನೈಜ ಚಿತ್ರಣ.

ದುಡಿದು ದಣಿದ ಜೀವಕ್ಕೆ ಮನೆ ಆರಾಮದ ತಾಣ. ತಲೆಗೆ ಕಟ್ಟಿದ ರುಮಾಲನ್ನು ತೆಗೆದು ಅತ್ತ ಜಗತಿಯ ಮೇಲೊಗೆದು ಕುಳಿತ ವ್ಯಕ್ತಿಯ ಚಿಂತನೆಗಳು ಎಷ್ಟೇ ವ್ಯಾಪಕವಾಗಲಿ ಅದು ಪರ್ಯವಸಾನ ವಾಗುವುದು ಸುರಕ್ಷಿತ ತಾಣವಾದ ಮನೆಯಲ್ಲಿ. ಜನಪದರದು ಸಹಜ ಬಾಳು, ಕಷ್ಟದ ಬದುಕು ಹರಿವ ನೀರಿನಂತೆ ಬೀಸುವ ಗಾಳಿಯಂತೆ ನಿರಂತರ. ಯಾವ ಅಡಂಬರ ಡಂಭಾಚಾರವಿಲ್ಲದ ಕಾಯಕ ಈ ನೇಗಿಲ ಯೋಗಿಯದು. ಪ್ರಕೃತಿಯ ದರ್ಶನ ಅವರ ಅನುಭವೇ ಇವರ ಲೋಕ ಜ್ಞಾನ ಇವರ ನೋವು ನಲಿವಿನ ನುಡಿ ಮುತ್ತೇ ಗಾದೆ, ಗೀತೆ, ಕಥೆ, ಹಾಡು, ಹಸೆ. ಇದು ಕೇರಿ ಕೇರಿಯಲ್ಲಿದೆ ಹೊಲ ಗದ್ದೆಯಲ್ಲಿದೆ ತೋಟ ತುಡಿಕೆಯಲ್ಲಿದೆ. ನೇಗಿಲ ಯೋಗಿಯ ಹೊಟ್ಟೆ ಬಟ್ಟೆಗೆ ಆಧಾರವಾಗಿರುವವಳೇ ಭೂಮಿ ತಾಯಿ ಅವಳೇ ನಿತ್ಯ ಸತ್ಯ ದೇವತೆ. ದೊಡ್ಡ ಮನೆಯ ಜಗತಿಯ ಒಳಗೆ ಬಂದಲ್ಲಿ ಕೆತ್ತನೆಯ ವಾಸುಗಲ್ಲಿನ ಹಿರಿದಾದ ಹೆಬ್ಬಾಗಿಲು, ಕೆತ್ತನೆ

ಕಂಬಗಳ ಸಾಲಿನ ನಡುಮನೆ, ಮೂಲೆಯಲ್ಲೊಂದು ಕಣಜ ಅಲ್ಲೇ ಅದ್ದಿದ್ದ ರಾಗಿ ಕಲ್ಲು. ಮಹಡಿಗೆ ಹೋಗಲು, ಮರದ ಮೆಟ್ಟಿಲು. ಎಲ್ಲಾ ಶಾಸ್ತ್ರ ಸಂಬಂಧಗಳು ಈ ನಡುಮನೆಯಲ್ಲೇ ಆಗಬೇಕು. ಹಸೆಮಣೆ ಹಾಕಿ ತೇವಟಿಗೆ ಕಳಸ ತಂದಿಟ್ಟು ದೀಪ ಹಚ್ಚುವ ಮುಂಚೆಯೇ ಸೋಬಾನೆ ಚಿಕ್ಕಮ್ಮನ ಪದ ಹಾಡಲು ಒಂದು ಗಂಟೆ ಮುಂಚೆಯೇ ಶುರುವಾಗುತ್ತದೆ. ಆಗ ಎಲ್ಲಿಲ್ಲದ ಸಡಗರ, ಸಂಭ್ರಮ, ಕಳೆ, ತುಂಬಿ ಬರುತ್ತಿತ್ತು ಮಜ್ಜನ, ಮದುವೆ, ಸೋಬನ, ವೀಳ್ಯೇ ಶಾಸ್ತ್ರ, ಬೀಗರನ್ನು ಜರೆಯುವ ಹಾಡು, ಹೆಣ್ಣ ಕೊಟಾಡುವಾಗ ಬರುವ ಪದಗಳು, ಆ ದನಿ ದಾಟಿ ಸಾಹಿತ್ಯ ಇನ್ನೂ ನನ್ನ ಕಿವಿಯಲ್ಲಿ ಗುಯಿಗುಡುತ್ತಿದೆ. 'ಅತ್ತೆ ಮನೆಯಲ್ಲಿ ಮುತ್ತಾಗಿ ಇರು, ಮನೆಯೊಳಗೆ ಭೇದ ಬಗೀಬೇಡ, ಎಲೆ ಮಗಳೇ, ತುಂಬಿದ ಮನೆಯ ಒಡಿಬೇಡ' 'ನೆರೆಮನೆಯ ಸಿರಿ ಗೌರಿಯಾಗಿ ಮೆರೆದು ತವರಿಗೆ ಹೆಸರು ತಾ ಎಂದು ತಾಯಿ ಹರಸಿ ಕಣ್ಣೀರಿಡುತ್ತಾ ಕಳುಹುತ್ತಾಳೆ. ಅಲ್ಲಿ ಅತ್ತೆಯ ಕಾಟ 'ಕಟ್ಟಾಣಿ ಸೊಸೆಯೇ ಕರಿಯಾಕೆ ಬಂದವರೆ, ನೀ ಬಟ್ಟಲಾ ಹಾಲ ಕುಡಿಬಾರೆ' ಸೊಸೆ, 'ಬಂದವರ ಮುಂದೆ ಬರಿ ಮಾತಿನತ್ತಮ್ಮ ನೀನೆಂದಿನಂಬಲಿಯ ಬಿಡುಬಾರೆ' 'ತಾಯಿ ಇಲ್ಲದ ತವರಿಗೆ ನಾವು ಹೋಗುವುದೇ ಬಲು ಹೀನಾ, ನೀರು ಇಲ್ಲದ ಕೆರೆಗೆ ಕರು ಹೋಗಿ ಬಾಯಿ ಬಿಟ್ಟಂಗೆ' "ಹೆತ್ತಮ್ಮನಿದ್ದರೆ ನೆತ್ತಿಗೆಣ್ಣೆ ಒತ್ತ್ಯಾಳು, ಇನ್ನಷ್ಟು ದೂರ ಕಳುವ್ವೋಳು, ಅಣ್ಣನ ಹೆಂಡತಿ ಹಟ್ಟಿ ಬಾಕಲ ಬಿಟ್ಟು ಬರಲಿಲ್ಲ" "ತವರಿಗೆ ಮುಪ್ಪುಂಟೆ, ತಂಬಿಟ್ಟಿಗುಪ್ಪುಂಟೇ, ದೊಂಬರ ಗುಡಿಸಿಲಿಗೆ ಕದ ಉಂಟೇ, ಹಾರುವರ ಕಂದಮ್ಮಗುಂಟೇ ಮರಿಬಾಳು". 'ಹಡೆದವ್ವನಿದ್ದರೆ ಹೊಟ್ಟೆ ಗುಣ್ಣಲಿಕ್ಕೆ ಇನ್ನೋಟ ದೂರ ಕಳುವ್ವೋಳು ನನ್ನವ್ವ, ಹಟ್ಟಿಲೀ ನಿಂತು ನೆನೆವ್ವೋಳು'..... 'ಕಡಗ ಮುರಿದರೆ ಬಡಗಿ ಹಾಕಲುಬಹುದು, ಜವಳಿ ಅರಿದರೆ ತರಬಹುದು ಎಲೆನಾರಿ ನನ್ನ ಒಡಹುಟ್ಟು ಎಲ್ಲಿಂದ ಬರತ್ತೈತಿ

ಯುಗಾದಿ ಹಬ್ಬ ವರ್ಷಕ್ಕೊಂದು. ಅರವತ್ತು ಸಂವತ್ಸರಗಳಲ್ಲಿ ಬರುವ ಮತ್ತೊಂದು ಸಂವತ್ಸರದ ಪ್ರಾರಂಭ ದಿನವೇ ಈ ಚಂದ್ರಮಾನ ಯುಗಾದಿ. ಬ್ರಹ್ಮ ಈ ಭೂಲೋಕವನ್ನು ಸೃಷ್ಟಿಸಿದ ದಿನವೂ ಇದು ಎನ್ನುತ್ತಾರೆ. ಸಂಜೆ ಆಗುತ್ತಿದ್ದಂತೆ ಎಲ್ಲರೂ ಅರಳಿ ಕಟ್ಟೆಯ ಬಳಿ ಸೇರುತ್ತಾರೆ, ಜೋಯಿಸರಿಂದ ಯುಗಾದಿ ಫಲ ಕೇಳಲು ಮಣ್ಣಿನ ಮಕ್ಕಳಾದ ಇವರಿಗೆ ಭೂಮಿ ತಾಯಿ ಕೈ ತುಂಬಾ ಬೆಳೆ ಕೊಡುವಳೇ, ಆಯವ್ಯಯ ಎಷ್ಟು ಎಂದು ತಿಳಿಯುವ ಕುತೂಹಲ. ಆ ದಿನ ಹೊನ್ನಾರನ್ನು ಕಟ್ಟಲು ಯಾವ ಮೂಹೂರ್ತವು ಬೇಕಿಲ್ಲ. ಭೂಮಿ ತಾಯಿ ಒಳ್ಳೆ ಬೆಳೆ ಕೊಟ್ಟು ಕಣಜ ತುಂಬಿಕೊಳ್ಳುವ, ಕನಸು ಕಟ್ಟುವ ದಿನ. ಇದೆಲ್ಲಾ ನಿಸರ್ಗದಿಂದಲೇ ಕಲಿತು ಅದಕ್ಕೆ ತಮ್ಮ ಅನುಭವಗಳನ್ನು ಸೇರಿಸಿದರು. ಅವರ ಕಾಯಕದಲ್ಲೊಂದು ಗುರಿ ಇತ್ತು. ಆ ಸಾಮಾಜಿಕ ಪ್ರಜ್ಞೆಯಲ್ಲಿ ದೇಶದ ನಾಡಿನ ಭವಿಷ್ಯ ಆಗು ಹೋಗುಗಳನ್ನು ತಿಳಿಯುವ ಕುತೂಹಲವಿತ್ತು. ಗ್ರಾಮೀಣ ಬದುಕು ನೀಗುವುದು ಬಲು ಕಷ್ಟ. ಮಳೆಯನ್ನೇ ನೆಚ್ಚಿ ಬದುಕಬೇಕು ಸಂಶಯಗಳಲ್ಲಿ ಭರವಸೆಗಳನ್ನು ಹುದುಗಿಡುವ ಬದಲು, ಸಂಶಯಗಳನ್ನೇ ಹುದುಗಿ, ಆಸೆ ಭರವಸೆಗಳಲ್ಲಿ ಬದುಕುವುದು ಒಳ್ಳೆಯದು ಎನ್ನುತ್ತಾರೆ. ಇವೆಲ್ಲವೂ ಜೀವನದ ಕಟ್ಟುಪಾಡು ನೀತಿ, ನಿಯಮ ಯಾವುದನ್ನೂ ಉಲ್ಲಂಘಿಸದಂತೆ ಸಮಾಜದ ಚೌಕಟ್ಟಿನಲ್ಲೇ ಸಾಗುವರು ಈ ಜನಪದರು. "ಶರಣೆಂಬೆ ಹರನಿಗೆ, ಶರಣೆಂಬೆ ಶಿವನ ಮಡದೀಗೆ" ಶಿವರಾತ್ರಿ ದೊಡ್ಡ ಹಬ್ಬ. ನಾಗರಪಂಚಮಿಯಂದು ನನ್ನ ನಾಗತಿಹಳ್ಳಿ ಅಜ್ಜಿಯವರು ಬಹಳ ನಿಯಮದಿಂದ ಈ ಪಂಚಮಿಯನ್ನು ಆಚರಿಸುತ್ತಿದ್ದರು. ಈ ಹಬ್ಬದ ಆಚರಣೆಗಳಲ್ಲಿ ಈ ದೈವದಲ್ಲಿದ್ದ ನಂಬಿಕೆ, ಭಕ್ತಿ ಶ್ರದ್ಧೆ, ಇನ್ನು ಪಿತೃಪಕ್ಷ ಈ ದಿನಗಳಲ್ಲೂ ಊರಿಗೆ ಹೋಗುತ್ತಿದ್ದೆವು. ತಂದೆಗೆ ಹಿರಿ ಮಗನಾದವನು ಉಪವಾಸವಿದ್ದು ಮಧ್ಯಾಹ್ನದ ಹೊತ್ತಿಗೆ ತಿಲತರ್ಪಣವನ್ನು ಕೊಡುತ್ತಿದ್ದರು. ಇದಕ್ಕೆ ಜೋಯಿಸರು ಬೆಳ್ಳೂರಿನಿಂದ ಬರುತ್ತಿದ್ದರು. ಇವರು ತರ್ಪಣ

ಬಿಡುವಾಗ ಸ್ವರ್ಗವಾಸಿಗಳಾದ ಮೂರು ತಲೆಮಾರಿನ ಹಿರಿಯರ ಹೆಸರು ಹೇಳಿ ತರ್ಪಣ ಬಿಡಿಸುತ್ತಿದ್ದರು. ನಂತರ ಧೂಳು ಸಂಜೆ ಹೊತ್ತಿಗೆ ಎಡೆ ಬಡಿಸಿ ಧೂಪ ಹಾಕುತ್ತಿದ್ದರು. ಈ ಭಾವನಾತ್ಮಕ ಸಂಬಂಧದ ಈ ಕಾರ್ಯ ಪೀಳಿಗೆಯ ಭೂತ ಭವಿಷ್ಯತ್ತನ್ನೇ ಮುಂದೆ ಇಡುತ್ತಿತ್ತು. ನಾಣ್ಣುಡಿಯೊಂದು ಹೇಳುತ್ತದೆ ದೇವರ ಕಾರ್ಯ ನಿಂತರೂ ಪರವಾಗಿಲ್ಲ ಪಿತೃ ಪಕ್ಷದ ಕಾರ್ಯವನ್ನು ಮಾತ್ರ ತಪ್ಪದೇ ನಡೆಸಿಕೊಂಡು ಬರಬೇಕು ಎಂದು. ನಮ್ಮ ಬಾಳಿಗೆ ಬೆಳಕಾಗಿ, ದಾರಿ ದೀಪ, ಮಾರ್ಗದರ್ಶಕರಾಗಿ ಲಾಲಿಸಿ ಪಾಲಿಸಿ, ಬೆಳೆಸಿ, ವಿದ್ಯೆ ಬುದ್ಧಿ ಕಲಿಸಿ, ಬಾಳಿಗೆ ಸಂಪತ್ತು ಸೌಖ್ಯಗಳನ್ನು ಕೊಟ್ಟು ಒಂದು ಕುಟುಂಬದ ನೆನಪಿಸಿ, ಗೌರವಿಸಲೊಂದು ಶ್ರದ್ಧಾಪೂರ್ವಕ ಕಾರ್ಯವೇ ಪಿತೃಪಕ್ಷ. ಇವೆಲ್ಲವೂ ಅವರವರ ಮನೆಯಲ್ಲೇ ನಡೆಯುವ ಕಾರ್ಯ. ಒಂದೊಂದು ಕಥೆ ನೆನಪು. ಒಂದೊಂದು ವಸ್ತುವಿನಲ್ಲೂ ಆ ಹಿರಿಯ ಚೇತನಗಳು ಬಾಳಿ ಬದುಕಿದ ಚಿತ್ರಣ ನೆನಪಿಸುತ್ತಿತ್ತು ಈ ಪಕ್ಷ ಮಾಸ. ಎಲ್ಲೋ ಕಾಣದ ದೇವರಿಗಿಂತ ಕಾಣುವ ತಂದೆ ತಾಯಿ ಹಿರಿಯರೇ ದೇವರೆನ್ನುತ್ತಾರೆ ನಮ್ಮ ಹಿರಿಯರು. ಎಂತಹ ಹಿರಿ ಸಂಸ್ಕೃತಿ ಸಂಸ್ಕಾರ, ಸಂಪ್ರದಾಯ ಈ ಬಾಂಧವ್ಯದ ನಂಟು.

ಇನ್ನು ಅಜ್ಜಿ ಅತ್ತೆಯರ ಜೊತೆ ನೀರು ಸೇದಲು ಬಟ್ಟೆ ಒಗೆಯಲು ಕಾಲುವೆ ಅಥವಾ ಕೆರೆಯ ಹತ್ತಿರ ಹೋಗುತ್ತಿದ್ದರು. ಅಲ್ಲೆಲ್ಲ ನೀನು ಬರಬಾರದು ಬಿಸಿಲು ಜಾಸ್ತಿ ದೆವ್ವ, ಪೀಡೆ, ಪಿಶಾಚಿಗಳೆಲ್ಲ ಇರುತ್ತವೆ ಎಂದು ಹೆದರಿಸಿದರೂ ಬಿಡದೆ ಕಣ್ತಪ್ಪಿಸಿ ಹಿಂಬಾಲಿಸುತ್ತಿದ್ದೆ. ಮನುಷ್ಯರು ಮಾತ್ರ ಕಾಣಿಸುತ್ತಿದ್ದ ನನಗೆ ದೆವ್ವ ಪಿಶಾಚಿಗಳು ಹೇಗಿರಬಹುದೆಂಬ ಕುತೂಹಲ ಸಿಕ್ಕರೆ ನೋಡೋಣವೆಂಬ ತವಕ. ಮಧ್ಯಾಹ್ನ ಬುತ್ತಿ ತಿಂದು ಅಜ್ಜಿಯರ ಕೈ ಚೀಲದಿಂದ ಎಲೆ ಅಡಿಕೆ ಹಾಕಿಕೊಂಡು, ಒಮ್ಮೊಮ್ಮೆ ಬೇಡವೆಂದರೂ ಕೇಳದೆ ಅದರ ಜೊತೆ ಕಡ್ಡಿ ಪುಡಿಯನ್ನು ಹಾಕಿಕೊಂಡು ತಿಂದ ಮೇಲೆ ತಲೆ ಧಿಮ್ ಎಂದದ್ದೂ ಉಂಟು. ಕೋಡಿ ಬಿದ್ದ ಕೆರೆಯನ್ನು

ನೋಡುವುದೇ ಒಂದು ಸುಂದರ ದೃಶ್ಯ. ವಾಪಸ್ಸು ಬರುವಾಗ ಎಲ್ಲಾ ಚಿಕ್ಕ ತಾತಂದಿರ ಮನೆಗೂ ಹೋಗುವುದು. ಅಜ್ಜಿಯರೆಲ್ಲರೂ ಕುಡಿಯಲು ಕೊಡುತ್ತಿದ್ದರು. ಅಲ್ಲೇ ಮೂಲೆಯಲ್ಲೆಲ್ಲೋ ಕುಕ್ಕೆಯಲ್ಲಿ ಮರಿ ಮಾಡಲು ಕೂರಿಸಿದ ಕಾವಿನ ಕೋಳಿಯನ್ನು ಎತ್ತಿ ನೋಡುವುದು ಎಷ್ಟು ಮರಿಗಳಾಗಿವೆ ಎಂದು, ಅದು ಕೊರ್ರೆನ್ನುತ್ತಾ ಕುಕ್ಕುತ್ತಿತ್ತು. ಅಲ್ಲೇ ಬಾಗಿಲಲ್ಲಿ ಕಟ್ಟಿರುತ್ತಿದ್ದ ಮೇಕೆ, ಕುರಿ ಮರಿಗಳು. ಅದೆಷ್ಟು ಸಂಭ್ರಮ ನಲಿವು ಆ ಬಾಲ್ಯದಲ್ಲಿ ಅದೆಂತಹ ಬಂಧುತ್ವ, ಪ್ರೀತಿ, ವಾತ್ಸಲ್ಯ ಆ ಹಿರಿ ಚೇತನಗಳಲ್ಲಿ. ಹೀಗಿನ ಸಂಸಾರದ ಸಂವೇದನೆ ಪ್ರಪಂಚದ ನೋವು ಜಂಜಾಟಗಳಾಗಲೀ, ಬಾಂಧವ್ಯದ ಬಂಧನವಾಗಲಿ ಇರದ ಆ ಬಾಲ್ಯ ಮತ್ತೆ ಬರಬಾರದೇ ಎನಿಸುತ್ತದೆ. ಇನ್ನು ಕತ್ತಲಾದಾಗ ಆಚೆ ಬಂದರಂತು ಆಗಸದ ತುಂಬಾ ಕಾಣುವ ನಕ್ಷತ್ರಗಳು ಸಾವಿರಾರು ಕೋಟಿ. ಇದೇನು ಹಳ್ಳಿಗೆ ಬೇರೆ ಬಾನು ನಗರಗಳಿಗೇ ಬೇರೆಯೇ ಆಕಾಶ ಇದೆಯೇ ಎಂದುಕೊಳ್ಳುತ್ತಿದೆ. ಇದೆಲ್ಲಾ ನೆನೆದಾಗ ಕಾವ್ಯರ್ಷಿಯ ಪ್ರಾರ್ಥನೆಯೊಂದು ನೆನಪಿಗೆ ಬರುತ್ತದೆ. "ನನ್ನ ಬಾಂದಳದಂತೆ ನನ್ನ ಮನವಿರಲಿ, ನಿನ್ನ ಸಾಗರದಂತೆ ನನ್ನ ಎದೆಯಿರಲಿ, ನಿನ್ನ ಒಲವಿರುವಂತೆ ನನ್ನ ಒಲವಿರಲಿ, ನಿನ್ನ ತಿಳಿವಿರುವಂತೆ ನನ್ನ ತಿಳಿವಿರಲಿ. ನಿನ್ನ ಸುಗ್ಗಿಯ ತೆರದಿ ನನ್ನ ಸೊಬಗಿರಲಿ, ನಿನ್ನ ಲೀಲೆಯ ತೆರದಿ ನನ್ನ ಬಾಳಿರಲಿ, ನಿನ್ನೊಲುಮೆ ಅಂದದಲಿ ನನ್ನೊಲುಮೆ ಇರಲಿ, ನಿನ್ನಾಳವೆನಗಿರಲಿ ನೀನೇ ನನಗಿರಲಿ, ನಿನ್ನಾತ್ಮದಾನಂದ ನನ್ನದಾಗಿರಲಿ, ನಿನ್ನೊಳಿರುವ ಶಾಂತಿ ನನ್ನೆಡೆಗೆ ಬರಲಿ'. ಈಗಲೂ ಅದೇ ಹಳ್ಳಿ, ಊರು, ಅದೇ ಮನೆಗಳು, ಕೆರೆ, ಕಾಲುವೆ. ಆದರೆ ಆ ಮಮತೆಯ ಜೀವಗಳಾಗಲೀ, ಹಿರಿಯ ಚೇತನವಾಗಲೀ, ಚಿಕ್ಕಮ್ಮನಾಗಲೀ, ಆ ಭಾಂದವ್ಯ, ಹಳ್ಳಿಯ ಸೊಗಡಾಗಲೀ ಉಳಿದಿಲ್ಲ. ಆ ಹಿರಿತನ ಅಳಿದಂತೆ ನಾಗರೀಕತೆ ಹೆಚ್ಚಿದಂತೆ ಹಳ್ಳಿಯ ಸೊಗಡು ಅಳಿಯುತ್ತಿದೆ ಬಾಂಧವ್ಯದ ಕೊಂಡಿಯೂ ಕಳಚುತ್ತಿದೆ.

ಸರ್ಕಾರಿ ಕೆಲಸ ಎಂದ ಮೇಲೆ ಎರಡು–ಮೂರು ವರ್ಷಕ್ಕೊಮ್ಮೆ ವರ್ಗಾವಣೆ. ಕಂಡರಿಯದ ಜಾಗಗಳಾದರೂ ಅಲೆಮಾರಿ ಜನಾಂಗದವರಂತೆ ಗಂಟು ಮೂಟೆ ಕಟ್ಟುತ್ತಿರಬೇಕು. ಆಳು ಕಾಳುಗಳು ಬೇಕಾದ ಹಾಗೇ ಇದ್ದರು ಸಕಲ ಸಿದ್ಧತೆ ಮಾಡಲು. ಹಳೆ ಜಾಗ ಸ್ನೇಹಿತರು ಎಲ್ಲ ಬಿಡುವಾಗ ಬೇಸರ. ಮುಂದಿನ ಊರನ್ನು ನೋಡುವ ಆತುರ. ಹೊಸ ಜನ, ಊರು, ಶಾಲೆ ಅಲ್ಲಿ ಮುಂದಾಗುವ ಸ್ನೇಹಿತರು ಇವೆಲ್ಲ ನೆನೆದರೆ ಒಂದು ರೀತಿಯ ಸಂಭ್ರಮದಿಂದ ಮನ ಮುದಗೊಳ್ಳುತ್ತಿತ್ತು. ಜೀವನದ ಯಶಸ್ಸಿಗೆ ಬರಿ ದುಡ್ಡು, ಶಾಲೆ, ಕಾಲೇಜಾಗಲಿ, ಓದಿನಲ್ಲಿ ತೆಗೆದ ಅಂಕಗಳಾಗಲಿ ಮುಖ್ಯವಲ್ಲ. ನಿಜ ಜೀವನದಲ್ಲಿ ನೋಡುವ ಅನುಭವಿಸುವ ಸೋಲು ಗೆಲವು, ಆಸೆ ನಿರಾಸೆ, ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಹೋರಾಟ, ಹುಡುಕಾಟ, ಈ ರೀತಿಯ ಅನಾವರಣದಿಂದ ಜೀವನ ಕಲಿಸಿದ ಪಾಠವೇ ಅಪಾರ. ಬೆಳೆದಂತೆ ಜೀವನವನ್ನು ನೋಡುವ ದೃಷ್ಟಿಕೋನವು ಬದಲಾಗುತ್ತಾ ಹೋಗುತ್ತಿತ್ತು. ಹಾಗೇ ಅದು ಹಳೆಯದಾಗಿ ನೆನಪನಾಳಕ್ಕಿಳಿದೂ ಹೋಗುತ್ತಿತ್ತು.

ಏನೇ ಸರ್ಕಾರಿ ಕೆಲಸದ ಒತ್ತಡವಿದ್ದರೂ ತಮ್ಮ ಸಾಂಸಾರಿಕ ಜವಾಬ್ದಾರಿಯಿಂದ ಎಂದು ವಿಮುಖರಾದವರಲ್ಲ. ಒಳ್ಳೆ ಶಾಲೆಗಳಿಗೆ ಸೇರಿಸಿ, ಶಾಸ್ತ್ರೀಯ ಸಂಗೀತದ ಪಾಠ ಹೇಳಿಕೊಡಲು ನೇಮಿಸಿದಲ್ಲಿ ಅವರ ಅರ್ಧ ಕೆಲಸ ಮುಗಿದಂತೆ.

ಬೆಳಗಿನ ಜಾವದಲ್ಲಿ ಅಂದರೆ ಆರು ಗಂಟೆಗೆಲ್ಲ ರೇಡಿಯೋ ಆಕಾಶವಾಣಿ ಹಾಕುತ್ತಿದ್ದರು. ಅದರಲ್ಲಿ ಈ ಸುಂದರ ಸುಪ್ರಭಾತ ಬರುತ್ತಿತ್ತು. 'ವಂದೇ ಮಾತರಂ ಸುಜಲಾಂ, ಸುಫಲಾಂ, ಮಲಯಜ ಶೀತಲಾಂ, ಸಸ್ಯಶ್ಯಾಮಲ ಮಾತರಂ, ಶುಭ್ರಜ್ಯೋತ್ಸ್ನ ಪುಲಕಿತ ಯಾಮಿನಿ, ಪುಲ್ಲ ಕುಸುಮಿತ ಧ್ರುಮದಳ ಶೋಭಿನಿ, ಸುಹಾಸಿನಿ, ಸುಮುಧುರ ಭಾಷಿಣಿ, ಸುಖದಾಂ, ವರದಾಂ, ಮಾತರಂ, ವಂದೇಮಾತರಂ' ಸುಂದರ,

ವಸುಂಧರೆ, ಮನೋಹರೆಯಾದ ಭರತ ಭೂಮಿಯ ವರ್ಣನೆಯ ಬಲುಸುಂದರ ಸುಪ್ರಭಾತ ಮಲಗಿದ್ದಲ್ಲೇ ಕಿವಿಗೆ ಬೀಳುತ್ತಿತ್ತು.

ಗಾಂಧಿವಾದಿಯಾದ ಇವರು ಚರಕದಿಂದ ಮತ್ತು ತಕಲಿಯಿಂದ ಹತ್ತಿ ನೂಲು ತೆಗೆಯುತ್ತಿದ್ದರು. ಕೈಯಿಂದ ನೂತದಾರವನ್ನೆಲ್ಲ ಬಟ್ಟೆಯಾಗಿ ನೇಯಿಸಿ ಹಾಕಿಕೊಂಡದ್ದು ಉಂಟು ನನಗೂ ಚರಕದಿಂದ ನೂಲು ತೆಗೆಯುವುದನ್ನು ಕಲಿಸಿದ್ದರು. ಇವರಿಗೆ ಸಮಯ ಪ್ರಜ್ಞೆ ಬಹಳ, ಕಾಲ ಹರಣ ಮಾಡಬಾರದು ಕಾಡು ಹರಟೆ ಹೊಡೆಯಬಾರದು. ವೃಥಾ ಕಳೆದ ಕಾಲ ಮತ್ತೆ ಬರಲಾರದು ಎನ್ನುತ್ತಿದ್ದರು. ನಾವು ಶಾಲೆಯಲ್ಲಿ ತೆಗೆದ ಅಂಕಗಳನ್ನು ನೋಡಿ ಬೇಕಾದಲ್ಲಿ ಪಾಠದ ಮೇಷ್ಟ್ರನ್ನು ಮನೆಗೆ ಬಂದು ಹೇಳಿಕೊಡಲು ನೇಮಿಸುತ್ತಿದ್ದರು. ಬೇಸಿಗೆ ರಜೆ ಬಂದಲ್ಲಿ ಹಿಂದಿ, ಕಸೂತಿ, ಮಿಷನ್‌ನಲ್ಲಿ ಬಟ್ಟೆ ಹೊಲಿಯುವುದು ಏನಾದರೂ ಕಲಿಯುತ್ತಿರಬೇಕಿತ್ತು. ಆಗ ಅವೆಲ್ಲಾ ಬೇಜಾರೆನ್ನಿಸಿದರೂ ನಂತರ ಅದರ ಅವಶ್ಯಕತೆ ಉಪಯೋಗ ಕಂಡುಕೊಂಡು ಕಲಿತ ಯಾವ ವಿದ್ಯೆಯೂ ಕೇಡಿಲ್ಲ ಎನ್ನಿಸುತ್ತಿತ್ತು.

ಹಾಗೇ ನಾನು ಓದುವ ಕಥೆ ಪುಸ್ತಕಗಳ ಬಗ್ಗೆಯೂ ನಿಗಾ ಇಡುತ್ತಿದ್ದರು. ಕೆಟ್ಟ ಅಶ್ಲೀಲ ಸಾಹಿತ್ಯಗಳನ್ನೆಲ್ಲಿ ಓದುತ್ತಾರೋ ಎಂದು ಅವರೇ ಪುಸ್ತಕಗಳನ್ನು ಕೊಂಡು ತರುತ್ತಿದ್ದರು. ಸಾಹಿತಿಗಳಿಗೆ ಯಾವಾಗಲೂ ಪುಸ್ತಕಗಳನ್ನು ಕೊಂಡು ತಂದು ಓದುವ ಹವ್ಯಾಸ. ವರ್ಗವಾದಲ್ಲೆಲ್ಲ ಇವರ ಪುಸ್ತಕಗಳನ್ನು ಜೋಡಿಸಿ ಕಟ್ಟಲು ಬಹಳ ಮುತುವರ್ಜಿ ವಹಿಸುತ್ತಿದ್ದರು. ಮುಂದಿನೂರಿನಲ್ಲಿ ಬಿಚ್ಚಿದಾಗಲೂ ಇವರೇ ತೆಗೆದು ಜೋಡಿಸಬೇಕು. ಮುಂಚಿನಿಂದಲೂ ನನ್ನ ತಂದೆಯ ಪುಸ್ತಕ ಭಂಡಾರ ಅಪಾರ. ಅದರಲ್ಲಿ ಹೆಚ್ಚಾಗಿ ಕಾವ್ಯರ್ಷಿ ಕುವೆಂಪುರವರ 'ರಾಮಾಯಣ ದರ್ಶನಂ', 'ಕಾನೂರು ಸುಬ್ಬಮ್ಮ ಹೆಗ್ಗಡತಿ', ಕವನಗಳು ಮತ್ತು ಅವರ

ಅನೇಕ ಕಾದಂಬರಿಗಳು, ಗಾಂಧೀಜಿಯವರ 'ಸತ್ಯ ಶೋಧನೆ', ವಿ. ಸೀತಾರಾಮಯ್ಯನವರ 'ವಚನ ಭಾರತ', ಮತ್ತು ಮನೆಗೆ ತರಿಸುತ್ತಿದ್ದ ಪ್ರಬುದ್ಧ ಕರ್ನಾಟಕ, ಕಸ್ತೂರಿ, ಮಾಸ ಪತ್ರಿಕೆಗಳು. ಇವುಗಳೇ ಸುತ್ತಮುತ್ತ ಇದ್ದ ಕಾರಣ ಓದುತ್ತಾ ಓದುತ್ತಾ ಉತ್ತಮ ಸಾಹಿತ್ಯದ ಅಭಿರುಚಿ ಬೆಳೆಯಿತು. ಉತ್ಕೃಷ್ಟ ಸಾಹಿತ್ಯ ಯಾವಾಗಲೂ ಮೃಷ್ಟಾನ್ನ ಭೋಜನ ಉಂಡಂತೆ ಜೀರ್ಣಿಸಿಕೊಳ್ಳಲು ಕಷ್ಟವಾದರೂ, ಏನು ಓದಲೂ ಸಿಗದಾಗ ಮತ್ತೆ ಮತ್ತೆ ಅದನ್ನೇ ಓದಿದಾಗ ನಿಧಾನವಾಗಿಯಾದರೂ ತಲೆಗೆ ಹೋಗುತ್ತಿತ್ತು. ಒಮ್ಮೆ ನನಗೆ ಓದಲು ತಂದುಕೊಟ್ಟು ಕೆ.ವಿ. ಅಯ್ಯರ್‌ರವರ ಎರಡು ಕಾದಂಬರಿಗಳು ನಾಟ್ಯರಾಣಿ 'ಶಾಂತಲೆ'. ಹೊಯ್ಸಳೇಶ್ವರ ರಾಜ ವಿಷ್ಣುವರ್ಧನನ ಪಟ್ಟಮಹಿಷಿ ನಾಟ್ಯರಾಣಿ ಶಾಂತಲೆಯದು ಮತ್ತೊಂದು 'ರೂಪದರ್ಶಿ' ಬಾಲ ಯೇಸುವಿಗೆ ರೂಪದರ್ಶಿಯಾದವನು ಕೊನೆಯಲ್ಲಿ ಸೈತಾನನಿಗೆ ರೂಪದರ್ಶಿಯಾಗಬೇಕಾದ ಪ್ರಸಂಗ. ಇವೆರಡು ನಿಜ ಜೀವನ ಕಥೆಗಳು ಇನ್ನು ನನ್ನ ಮನದಾಳದಲ್ಲಿ ತಿಳಿಯಾಗೇ ಇದೆ. ಒಮ್ಮೆ ಇಂಗ್ಲೀಷ್ ಕವಿಗಳಾದ ಷೇಕ್ಸ್‌ಪಿಯರ್, ಶೆಲ್ಲಿ, ವರ್ಡ್ಸ್‌ವರ್ಥ್ ಮುಂತಾದ ಹೆಸರಾಂತ ಇಂಗ್ಲೀಷ್ ಕವಿಗಳ ಮೂಲ ಪ್ರತಿಗಳ ಮುವತ್ತು ಪುಸ್ತಕಗಳು ಮುನ್ನೂರು ರೂ.ಗಳಿದ್ದು, ರಿಯಾಯಿತಿಯಲ್ಲಿ ನೂರ ಎಂಭತ್ತು ರೂ.ಗಳಿಗೆ ಸಿಕ್ಕಿತ್ತೆಂದು ಮನೆಗೆ ತಂದರು. ಕೆಂಪು ಮತ್ತು ಕಪ್ಪು ಕ್ಯಾಲಿಕೋ ಕವಚವಿದ್ದ ಚಿಕ್ಕ ಸಣ್ಣ ಅಕ್ಷರದ ಪುಸ್ತಕಗಳು. ಅದನ್ನು ನೋಡಿ ನನ್ನ ತಾಯಿ ಸಿಟ್ಟುಗೊಂಡು ಮನೆಯಲ್ಲಿ ಬೇಕಾದಷ್ಟು ಖರ್ಚುಗಳಿವೆ ಅಂಥದರಲ್ಲಿ ಪುಸ್ತಕಗಳಿಗೆ ಇಷ್ಟೊಂದು ದುಡ್ಡು ಸುರಿದಿದ್ದೀರಲ್ಲ ಎಂದರು. ಆವಾಗ ನೂರ ಎಂಭತ್ತು ರೂ.ಗಳೆಂದರೆ ಬಹಳ ದೊಡ್ಡ ಮೊತ್ತ. ನನ್ನ ಅಮ್ಮನಿಗೆ ಆ ಪುಸ್ತಕ ಜ್ಞಾನ ಭಂಡಾರದ ಬೆಲೆ ಎಷ್ಟು ಲಕ್ಷ ಕೊಟ್ಟರು ಕೊಳ್ಳಲಾಗದ ಬಹು ದೊಡ್ಡ ಆಸ್ತಿ ಎಂದು ತಿಳಿದಿರಲಿಲ್ಲ. ಅಧಿಕಾರಿಗಳಾಗಲಿ ಸಾಹಿತಿಗಳಿಗಾಗಲಿ ಒಂದು ಜವಾಬ್ದಾರಿ ಇದೆ. ಜೀವನ ಸಾರ್ಥಕತೆಯೇ ಮೂಲ

ಗುರಿಯಾಗಿರುವವರಿಗೆ ಅರ್ಥದ ಅರ್ಥವೇ ಬೇರೆ. ಸಾಹಿತ್ಯ ಕ್ಷೇತ್ರದಲ್ಲಿ ಹೆಸರನ್ನು ಗಳಿಸಿದರೂ ಜೀವನದ ಅರ್ಥವನ್ನು ಕಂಡುಕೊಂಡಾಗ ನಿಜವಾದ ಅರ್ಥದ (ಹಣ) ಬೆಲೆ ಇಲ್ಲಿ ಶೂನ್ಯ. ಹಣ ಬೇಕು ಅದು ಅವರ ದಿನ ನಿತ್ಯ ಅಗತ್ಯಗಳಿಗಷ್ಟೇ ಮಕ್ಕಳು ಮೊಮ್ಮಕ್ಕಳು ಎಂದು ಮೂರು ತಲೆ ಮಾರಿಗಾಗುವಷ್ಟು ಹಣ ಮಾಡುವುದಲ್ಲ. ಮುಂದೆಂದೋ ಜಾನಪದ ಲೋಕವನ್ನು ಬೃಹತ್ ಆಗಿ ಬೆಳೆಸುವ ದೂರಾಲೋಚನೆ, ದೂರದೃಷ್ಟಿ ಇದ್ದ ಇವರಿಗೆ ಈ ನಾಡಿನ ಮಕ್ಕಳು ಮೊಮ್ಮಕ್ಕಳು ಕೇಳಿ ಕಲಿಯುವ ಜ್ಞಾನದ ಜಾನಪದ ಲೋಕವೇ ಈ ಕೌಟಿಲ್ಯನ ಅರ್ಥ ಸಂಗ್ರಹ. ಈ ನಾಡಿಗೆ ನೀಡಿದ ಬೆಲೆ ಕಟ್ಟಲಾರದ ಅಪೂರ್ವ ಅಮೂಲ್ಯ ಸಂಪತ್ತು.

ಯಾವ ಊರಿಗೆ ವರ್ಗವಾಗಿ ಹೋದರೂ ಅಲ್ಲಿ ಒಬ್ಬರು ಶಾಸ್ತ್ರೀಯ ಸಂಗೀತ ಪಾಠ ಹೇಳಿಕೊಡುವ ಗುರುಗಳನ್ನು ಕರೆಸುತ್ತಿದ್ದರು. ನಾವು ತಂಬೂರಿ ಅಥವ ಹಾರ್ಮೋನಿಯಂ ಶೃತಿ ಇಟ್ಟುಕೊಂಡು ಸಂಗೀತ ಅಭ್ಯಾಸವನ್ನು ಮಾಡಬೇಕು. ವೀಣೆ ನುಡಿಸುವ ಅಭ್ಯಾಸವು ಆಯಿತು. ಹಾಡುತ್ತಾ ಹಾಡುತ್ತಾ ರಾಗ ಇಂಪಾಗುತ್ತದೆ, ನರಳುತ್ತಾ ನರಳುತ್ತಾ ರೋಗ ಜಾಸ್ತಿಯಾಗುತ್ತದಂತೆ.

ಸಂಗೀತ ಒಂದು ಗಂಧರ್ವ ಕಲೆ, ಗಂಧರ್ವ ಗಾನ, ಸ, ರಿ, ಗ, ಮ, ಪ, ದ, ನಿ, ಎಂದು ಹಾಡುವ ಸಪ್ತಸ್ವರಗಳಿಗೆ ಯಾವುದೇ ಭಾಷೆಯ ಪರಿಮಿತಿ ಇಲ್ಲ, ಎಲ್ಲೆಯೂ ಇಲ್ಲ, ಯವುದೇ ಜಾತಿ, ಮತ, ಭೇದ, ದೇಶ, ಭಾಷೆ, ಕಾಲ ಇದಕ್ಕಿಲ್ಲ. ಓಂಕಾರ ನಾದ ರೂಪದಂತೆ ಅಂತ್ಯವೇ ಇಲ್ಲದ ಅನಂತ ಈ ದೇವಗಾನ.

ಮಾನಸಿಕ ವಿಕಾಸತೆ ಧನಾತ್ಮಕ ಚಿಂತನೆ ಸತ್ಯ, ನಡತೆ, ಸಭ್ಯತೆ, ಸಂಸ್ಕೃತಿ, ನಡೆನುಡಿ, ಬಾಳಿನ ಪ್ರತಿ ಹಂತದಲ್ಲೂ ಬರುವ ಗುರು ಹಿರಿಯರು ನೀಡಿದ ಈ ಮಾರ್ಗದರ್ಶನ ಒಂದು ಭದ್ರ ಬುನಾದಿ ಹಾಕಿದಂತೆ. ಕತ್ತಲಿನಿಂದ ಬೆಳಗಿನೆಡೆಗೆ ಅಂದರೆ ಅಜ್ಞಾನದಿಂದ ಜ್ಞಾನದೆಡೆಗೆ, ಅಸತ್ಯದಿಂದ

ಸತ್ಯದೆಡೆಗೆ. ಮೃತ್ಯುವಿನಿಂದ ಅಮೃತದೆಡೆಗೆ ದಾರಿ ತೋರುವ ಗುರು. ವೇದಗಳು ಸಾರುತ್ತವೆ 'ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ' ಎಂದು. ಮನೆಯೇ ಮೊದಲ ಪಾಠ ಶಾಲೆ ತಾಯಿಯೇ ಮೊದಲ ಗುರು. ಇನ್ನು ಗುರುವಿನ ಸ್ಥಾನಕ್ಕಂತೂ ಅಗ್ರ ಸ್ಥಾನ. ಗುರುವೇ ಬ್ರಹ್ಮ, ವಿಷ್ಣು, ಮಹೇಶ್ವರ, ಪರಬ್ರಹ್ಮ ಎಂದು. ಧ್ಯಾನ, ಮಂತ್ರ ಕಲಿಯಲು ಕೊನೆಗೆ ಮೋಕ್ಷ ಮಾರ್ಗವನ್ನು ತೋರಿ ಉಪದೇಶಿಸಲು ಗುರುವೇ ಬೇಕು. ಜೀವನದಲ್ಲಿ ಒಂದು ಹಂತಕ್ಕೆ ಬಂದು ನಿಲ್ಲಬೇಕೆಂದರೆ ಗುರುವೇ ಕಾರಣ.

ನಮ್ಮ ಭಾರತದ ಸಂಸ್ಕೃತಿ ವಿಶ್ವ ಪರಂಪರೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ವೇದ, ಪುರಾಣ, ಉಪನಷತ್ತು, ಆಯುರ್ವೇದ, ವಾಸ್ತುಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಗಣಿತಶಾಸ್ತ್ರ ಹೀಗೆ 64 ವಿದ್ಯೆಗಳ ಆಗರವಾದ ಶ್ರೀಮಂತ ಸಂಸ್ಕೃತಿಯ ದೇಶವಿದು ನಮ್ಮ ಜನ್ಮ ಭೂಮಿ. ಪತಂಜಲಿ, ಚರಕ, ಸುಶೃತ ಆರ್ಯಭಟ ಮುಂತಾದ ಮಹಾಮೇಧಾವಿಮುನಿಗಳ, ಗುರುಗಳ ನಾಡಿದು. ಇನ್ನು ಹತ್ತು ಜನ್ಮ ಹೊತ್ತರು ಸಾಲದು ಇದೆಲ್ಲ ಕಲಿಯಲು. ನಮ್ಮ ಅರಿವು ಈ ಜ್ಞಾನ ಸಾಗರದಲ್ಲಿನ ಒಂದೆರಡು ಹನಿ ಮಾತ್ರ. ಇದೊಂದು ಗುಪ್ತನಿಧಿ ಇದ್ದಂತೆ, ತಿಳಿದಷ್ಟು, ತೋಡಿದಷ್ಟು ಹಿಂಗದ ದಾಹ ಮತ್ತು ಯಾರು ಕದಿಯಲಾರದ ಸ್ಥಿರಾಸ್ತಿ. ಎಲ್ಲ ಆಸ್ತಿ, ಅಂತಸ್ತು, ದುಡ್ಡು ಕೈಬಿಟ್ಟರು, ವಿದ್ಯೆ ಮಾತ್ರ ಕೈ ಬಿಡುವುದಿಲ್ಲ. ಇದರ ಸ್ಥಾನ ಮನ, ಅವಸಾನ ಎಲ್ಲ ನಮ್ಮೊಂದಿಗೆ. ಜನ್ಮ ನೀಡಿದ ತಂದೆ ತಾಯಿ, ಜನಿಸಿದ ಜನ್ಮ ಭೂಮಿ, ಜ್ಞಾನ ನೀಡಿದ ಜ್ಞಾನ ದಾತ ಇವರ ಋಣವನ್ನು ಯಾವ ಜನ್ಮದಲ್ಲೂ ತೀರಿಸಲಾಗದು. ಎಲ್ಲರ ವ್ಯಕ್ತಿತ್ವದ ವಿಕಾಸದ ಹಿಂದೆ ಸ್ತ್ರೀಶಕ್ತಿಯ ಧಾರೆಯಿರುತ್ತದೆ. ಇದಕ್ಕೆ ಹೊರತಲ್ಲ ನನ್ನಮ್ಮ. ಈ ಜಾಡಿನಲ್ಲಿ ಬೆಂಬಿಡದೆ ಜೊತೆ ಜೊತೆಯಾಗಿ ನಡೆದು ಎಲೆಮರೆಯಕಾಯಿಯಂತೆ ಹಗಲಿರುಳು ನಿಸ್ವಾರ್ಥತೆಯಿಂದ ಸೇವೆ ಮಾಡಿದವರು ನನ್ನ ತಾಯಿ. ಆಕೆಯ ಸಹನೆ,

ತ್ಯಾಗಮಯ ಮನೋಭಾವ, ಪ್ರೀತಿ, ಗೌರವ ಇವೆಲ್ಲ ತನ್ನ ತಂದೆಯ ಕೊನೆ ಉಸಿರಿರುವವರೆಗೂ ಪ್ರೇರಕ ಶಕ್ತಿಯಾಗಿ ರಕ್ಷಾ ಕವಚದಂತ್ತಿತ್ತು. ಸಾಹಿತ್ಯ ಕ್ಷೇತ್ರದಲ್ಲಿ ತಾಯಿ ಸರಸತಿ ಕೈಹಿಡಿದು ನಡೆಸಿದರೆ ಸಾಂಸಾರಿಕ ಕ್ಷೇತ್ರದಲ್ಲಿ ಗೃಹ ಲಕ್ಷ್ಮಿಯಾಗಿ ಕೈಹಿಡಿದು ಎಡೆಬಿಡದೆ ಕೊನೆಯ ಉಸಿರು, ಕೊನೆಯ ಹೆಜ್ಜೆಯವರೆಗೂ ನೋಡಿಕೊಂಡ ಮಮತೆಯ ಜೀವ. ಇವರ 65 ವರ್ಷಗಳ ದಾಂಪತ್ಯದ ಸಹಜೀವನ ಇವರ ಜೀವನದುದ್ದಕ್ಕೂ ಶಕ್ತಿ ಸಿಂಚನವಾಗಿತ್ತು. ನನ್ನ ತಂದೆಯದ್ದೂ ಶಿಸ್ತಿನ ಜೀವನ ವೈವಿಧ್ಯಯಮಯ ವ್ಯಕ್ತಿತ್ವ, ಸತ್ಯಸಂಧತೆ, ಬಿಚ್ಚು ಮಾತು, ಸ್ವಲ್ಪ ಮುಂಗೋಪಿತನ ಇವೆಲ್ಲಕ್ಕೂ ನನ್ನ ತಾಯಿ ಒಗ್ಗಿ ಹೋಗಿದ್ದರು. ಅವರು ಯಾರೊಂದಿಗೂ ತಮ್ಮ ಭಾವನೆಗಳನ್ನಾಗಲಿ, ಅನಿಸಿಕೆಗಳನ್ನಾಗಲಿ ಹೇಳಿಕೊಂಡವರಲ್ಲ. ಹೆಚ್ಚಾಗಿ ಅಂತರ್ಮುಖಿಯಾಗಿದ್ದುದೆ ಜಾಸ್ತಿ. ಆಫೀಸಿನ ಕೆಲಸವಾಯಿತು ಅವರ ಬರವಣಿಗೆಯಾಯಿತು ಹೆಚ್ಚು ಮಾತು ಆಡುತ್ತಿರಲಿಲ್ಲ. ಕಾಯಕವೆ ಕಾರ್ಯೋನ್ಮುಖರಾಗಿದ್ದುದೆ ಹೆಚ್ಚು. ತಮ್ಮ ಗುರಿಯ ಸಾಧನೆಯಲ್ಲಿಯೆ ತೊಡಗಿಸಿಕೊಂಡವರು. ನಮಗೆ ಅವರಲ್ಲಿ ಪ್ರೀತಿ, ಹೆದರಿಕೆ, ಗೌರವ ಎಲ್ಲ ಇದ್ದರೂ ಸಲಿಗೆಯಿಂದ ಯಾವತ್ತು ಮನ ಬಿಚ್ಚಿ ಮಾತನಾಡಿದವರಲ್ಲ, ನನ್ನ ತಾಯಿಯ ಮಧ್ಯಸ್ಥಿತಿಕೆಯಲ್ಲಿಯೆ ನಡೆಯಬೇಕು.

ನಮ್ಮದು ಅಂತಹ ಮಹಾದಾಸೆಗಳೇನೂ ಇರುತ್ತಿರಲಿಲ್ಲ. ಊರಿಗೆ ಬಂದ ಹೆಸರಾಂತ ನಾಟಕಗಳು ಮತ್ತು ಸಿನಿಮ ನೋಡುವುದೇ ದೊಡ್ಡ ಆಸೆ ಆಗುತ್ತಿತ್ತು. ಇವೆಲ್ಲ ಉತ್ತಮ, ಅತ್ಯುತ್ತಮವಾದಲ್ಲಿ ಮಾತ್ರ ನೋಡಲು ಅನುಮತಿ. ಬೇಡ ಎಂದಲ್ಲಿ ಮುಗಿಯಿತು. ನಿರಾಶೆಯಾಗಿ ಮನಸ್ಸಿನಲ್ಲಿ ಬಹಳ ಹೊಯ್ದಾಟವಾಗುತ್ತಿತ್ತು. ಆಗ ಅನಿಸುತ್ತಿತ್ತು ನಮಗೆ ಯಾಕೆ ಈ ಅಂಕೆ ಶಂಕೆ ಎಂದು. ಈಗ ಅರಿವಾಗುತ್ತದೆ. ಮಕ್ಕಳು ಸಮಾಜದಲ್ಲಿ ಸನ್ನಡತೆ ಸುಬುದ್ಧಿ ಸುಸಂಸ್ಕೃತಿಗಳಿಗೆಲ್ಲ ಈ ಮಾರ್ಗದರ್ಶನ ಆಗ ನಮಗೆ

ಬೇಸರವೆನಿಸಿದರೂ ಆ ಎಳೆ ಜೀವನ ಕಲಿಸಿದ ಅನುಭವ ಪಾಠ ಅಪಾರ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ' ಎಂದು.

ಜಾನಪದ ಲೋಕ ನನ್ನ ತಂದೆಯ ಕನಸಿನ ಕೂಸು ಆನೆ ನಡೆದದ್ದೇ ದಾರಿ ಎಂಬಂತೆ ಒಂದೇ ದಾರಿ, ಒಂದೇ ಛಲ, ಅದರದೇ ಕನಸು. ತಪಸ್ಸಿನೋಪಾದಿಯಲ್ಲಿ ಸಾಧಿಸಿದ ಫಲವೇ ಜಾನಪದ ಲೋಕ. ಲೋಕಸೇವಾ ಸದಸ್ಯತ್ವದಿಂದ ನಿವೃತ್ತಿ ಹೊಂದಿದ ಮೇಲೆ ಅಭಿನಂದನ ರೂಪದಲ್ಲಿ ನೀಡಿದ ರೂ. 1,20,000/–ಗಳನ್ನು ಇಡುಗಂಟಾಗಿಸಿ ಸರ್ಕಾರಿ ಕೆಲಸದಿಂದೇನೋ ನಿವೃತ್ತಿ, ಆದರೆ ಜಾನಪದ, ಸಾಹಿತ್ಯದ, ಬರವಣಿಗೆ ಯಿಂದ ಆವೃತ್ತವಾದ ಮನಕ್ಕೆ ನಿವೃತ್ತಿ ಒಂದು ವರವೇ ಆಯಿತು. ಇನ್ನೂ ಚುರುಕಾಗಿ ಪೊರೆ ಬಿಟ್ಟ ನಾಗನಂತ 'ನನ್ನದು ಯಾವಾಗಲೂ ಚಿಂತನೆಯೇ ಹೊರತು ಚಿಂತೆ ನನಗಿಲ್ಲ' ಎನ್ನುತ್ತಿದ್ದರು. ಎಲ್ಲರೂ ನಿವೃತ್ತರಾದ ಮೇಲೆ ಕಾಲ ಕಳೆಯುವುದು ಹೇಗೆಂದು ಯೋಚಿಸಿದರೆ ಇವರಿಗಿದ್ದ ಹವ್ಯಾಸಗಳಿಗೆ ಕಾಲವೇ ಸಾಕುತ್ತಿರಲಿಲ್ಲ. "ನೀ ಮೆಟ್ಟುವ ನೆಲ ಅದೇ ಕರ್ನಾಟಕ, ನೀನೇರುವ ಮಲೆ ಸಹ್ಯಾದ್ರಿ, ನೀ ಮುಟ್ಟುವ ಮರ ಶ್ರೀ ಗಂಧದ ಮರ, ನೀ ಕುಡಿಯುವ ನೀರ್ ಕಾವೇರಿ", ಹೀಗಿತ್ತು ತಿರುಗಾಟ. ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿದ್ದಾಗ ಸಾಕಷ್ಟು ಜಾನಪದ ಸಂಕಲನ ನಡೆದೇ ಇತ್ತು. ಆದರೆ (ಮಂಗಳೂರು) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಘಟ್ಟ ಬಿಟ್ಟು ಇಳಿದ ಮೇಲೆ ಇವರಿಗೆ ಸಿಕ್ಕಿದ್ದು ಜಾನಪದ ಕಲೆಗಳ ಚಿನ್ನದ ಗಣಿ.

ಇದನ್ನು ಸಾಕ್ಷಾತ್ಕಾರಗೊಳಿಸಲು ಭಗೀರಥ ಭೂಮಿಗೆ ಗಂಗೆಯನ್ನು ಇಳಿಸಿದಷ್ಟೇ ಶ್ರಮ ವಹಿಸಿದ್ದಾರೆ. ಇದಕ್ಕೊಂದು ರೂಪು ರೇಷೆ ಕೊಡಲು ಪಟ್ಟ ಕಷ್ಟ ಯಾರೂ ಪಡಲಾರರು. ಸರ್ಕಾರದಿಂದ ನೀಡಿರುವ ಭೂಮಿ ಮತ್ತು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಜಿಯವರು ತಮಗೆ ಸೇರಿದ ಭೂಮಿಯನ್ನು ಕೊಟ್ಟು ಪ್ರಾರಂಭವಾಯಿತು ಈ ಜಾನಪದ

ಲೋಕದ ಸೃಷ್ಟಿ. ಇವರಿಗೆ ತಮ್ಮ ಕೈಲಾದ ಸಹಾಯವನ್ನು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ಅನೇಕ ರೀತಿಯಿಂದ ಅನೇಕರು ಸಹಾಯ ಮಾಡಿದ್ದಾರೆ. ಹಂತಹಂತವಾಗಿ ಬೆಳೆದು ಬಂದ ಈ ಲೋಕ ಮಧ್ಯದಲ್ಲಿ ಸರಕಾರದ ಸರಿಯಾದ ಅನುದಾನವಿಲ್ಲದೆ ಕುಂಟತೊಡಗಿತು. ಮಧ್ಯಾಹ್ನ ಮಲಗಿದ್ದಾಗಲೂ ಸರ್ಕಾರವನ್ನು ಬೈಯುತ್ತಾ ಜಾನಪದ ಲೋಕಕ್ಕೆ ಸರಿಯಾದ ಅನುದಾನ ಕೊಡುತ್ತಿಲ್ಲ ಎಂದು ಕನವರಿಸಿ ಕಂಗಾಲಾಗುತ್ತಿದ್ದರು. ಸಿಬ್ಬಂದಿಗಳಿಗೆಲ್ಲಾ ಸಂಬಳ ಮುಂತಾದವುಗಳೆಲ್ಲ ಸ್ವಲ್ಪ ಕೈಯಿಂದಲೇ ಕೊಡಬೇಕಾಯಿತು. ಕೊನೆ ಕೊನೆಯಲ್ಲಂತು ನಡೆಸಲು ಸಾಧ್ಯವೇ ಇಲ್ಲ ಇದನ್ನು ಮುಚ್ಚಿಬಿಡೋಣ ಎನ್ನುವ ಮಟ್ಟದವರೆಗೂ ಬಂದಿದ್ದರು.

ಅವರ ಅಂತರಾತ್ಮ ನಡೆಸಿದಂತೆ ನಡೆದು ಆದರ್ಶ, ಪ್ರಾಮಾಣಿಕತೆ ಸತ್ಯ ಸಂಧತೆಯ ಸರಕಾರಿ ಅಧಿಕಾರಿಯಾಗಿ ಈ ನಾಡಿಗೋಸ್ಕರ ಮಾಡಿದ ಈ ಸಿರಿ ಸಂಪತ್ತನ್ನು ಹೇಗೆ ಉಳಿಸಿಕೊಳ್ಳುವುದೆಂದೇ ಯೋಚನೆಯಾಗಿತ್ತು. ಏನೇ ಕಷ್ಟ ಬಂದರೂ ಇವರ ಸಿಬ್ಬಂದಿ ವರ್ಗದವರೆಲ್ಲರ ಸಹಕಾರ ಬಹಳವಿತ್ತು. ಇವತ್ತಿನವರೆಗೂ ಇವರದೇ ಒಂದು ದೊಡ್ಡಮನೆ ಕುಟುಂಬದವರಂತೆ ಸಾಮರಸ್ಯವಿದೆ. ಇವರ ಇನ್ನೊಂದು ವಿಶೇಷ ಗುಣವೆಂದರೆ ಹಿಡಿದ ಗುರಿಯನ್ನು ಸಾಧಿಸುವ ಛಲ. ಇವರಿಗೆ ಇತರರಿಂದ ಕೆಲಸ ತೆಗೆದುಕೊಳ್ಳುವ ಚಾಕಚಕ್ಯತೆ ಇತ್ತು. ಇವರು ಕೈ ಹಿಡಿದ ಕಾರ್ಯವನ್ನು ಸಾಧಿಸಿ ಮುಗಿಸದೆ ಬಿಡುತ್ತಿರಲಿಲ್ಲ. ಚರಿತ್ರೆ ತಾನಾಗಿಯೇ ಮರುಕಳಿಸುತ್ತದೆ ಎನ್ನುವುದಕ್ಕೆ ಇದೊಂದು ಸಾಕ್ಷಿ. ಒಂದು ಸಂಘ ಸಂಸ್ಥೆ ಪರಿಷತ್ತಾಗಲಿ ಕಟ್ಟಿ ಬೆಳೆಸುವುದೇನೋ ಹುಡುಗಾಟದ ಮಾತಲ್ಲ ಇದಕ್ಕೊಂದು ವಿಶೇಷ ಸಂಸ್ಕಾರವಿರಬೇಕು. ಒಲವು ಆದರ, ಸಾಧಿಸಿ ಬೆಳೆಸಿ ಕೊನೆಯ ಹಂತದವರೆಗೂ ಮುಟ್ಟುವ ಛಲವಿರಬೇಕು. ದುಡ್ಡಿನ ಬಲವಿದ್ದವರಿಗೆ ಒಲವಿರುವುದಿಲ್ಲ , ಒಲವಿದ್ದವರಿಗೆ ದುಡ್ಡಿನ ಬಲವಿರುವುದಿಲ್ಲ. ಯಶಸ್ಸು ಅಧಿಕಾರದ ಅಮಲಿನಲ್ಲಿ ತೇಲುವುದು ಸುಲಭ ಇದೆಲ್ಲವನ್ನು ಮೆಟ್ಟಿ

ನಿಂತು ಸಮಾಜದ ಕಡೆ ತಿರುಗಿ ಬಹಳಷ್ಟು ನಮಗೆ ನೀಡಿದ ಸಮಾಜದ ಋಣವನ್ನು ಹಿಂತಿರುಗಿಸುವುದು ಪರಮ ಕರ್ತವ್ಯವಾದರೂ ಬಹಳ ಕಷ್ಟದ ಕೆಲಸ. ಆ ಸಾಧನೆಯ ಸಾರ್ಥಕತೆಗೆ ಈ ಚೇತನದನರಂತರ ಹುಡುಕಾಟ, ಹೋರಾಟ. ಇಂತಹ ಜನರನ್ನು ಕಾಲವೇ ಸಂಪಾದಿಸುತ್ತದೆ. ಮತ್ತು ಕಾಲವೇ ಅವರನ್ನು ಸದಾ ಕಾಲ ಇರುವಂತೆ ಮಾಡುತ್ತದೆ.

ಒಂದು ದೇಶದ ಸಂಸ್ಕೃತಿಯನ್ನು ನಾಗರೀಕತೆಯನ್ನು ತಿಳಿಯ ಬೇಕಾದರೆ ದೇಶದ ತಾಯಿಬೇರಾದ ಜಾನಪದ ಸಂಸ್ಕೃತಿ ಸಂಪತ್ತಿನ ಹಿನ್ನೆಲೆ ಬೇಕು ಎನ್ನುತ್ತದೆ ಚರಿತ್ರೆ. ಇದು ಕರ್ನಾಟಕದ ಉದ್ದಗ್ಗಲ್ಲಕ್ಕೂ ಹಾಸುಹೊಕ್ಕಾಗಿ ಬಂದಿದೆ. ನಮ್ಮ ಪೂರ್ವಜರ ನಡೆ, ನುಡಿ, ಆಚಾರ, ಚಿಂತನ, ಮಂಥನ, ನೋವು, ನಲಿವು, ಸಹಜತೆ ಮುಗ್ಧತೆ ಬೆರಗು ಮೂಡಿಸುತ್ತದೆ. ಆ ಪದಗಳ ಸಾಹಿತ್ಯದಲ್ಲಿ ಜೀವನದ ಮೌಲ್ಯಗಳು ತುಂಬಿದೆ. ಗೀತೆಗಳಲ್ಲೂ ಸಹಜತೆ ನೋವು ನಲಿವಿಗೆ ಸ್ಪಂದಿಸುವ ಸಂವೇದನೆ ಇದೆ.

ಬಹಳ ಹಿಂದೆ ಹಳ್ಳಿಗಳಲ್ಲಿ ಮನೆ ಬಾಗಿಲಿಗೆ ಬರುವ ಹಾಲಕ್ಕಿ ಶಕುನ, ಬುಡಬುಡಿಕೆ, ಕೋಲೆಬಸವರು, ಗಂಗೆ ಗವರಿ ನಾಟಕ, ದೊಂಬಿ ದಾಸರಿಂದ ತೊಗಲುಗೊಂಬೆಯಾಟ, ಚೌಡಿಕೆ ಪದದವರು, ಮದುವೆಗಳಲ್ಲಿ ಕೇಳುತ್ತಿದ್ದ ಸೋಬಾನೆ ಪದಗಳು, ಗೀತೆ ಹೀಗೆ ಹಾಡಿ ಕುಣಿದು ನನ್ನ ತಾತನವರಿಂದ ಭತ್ತ, ರಾಗಿ ದಾನ ತೆಗೆದುಕೊಂಡು ಹೋಗುತ್ತಿದ್ದರಂತೆ. ಚಿಕ್ಕಂದಿನಿಂದಲೂ ಇದು ಕಿವಿಗೆ ಬೀಳುತ್ತಲೇ ಇದ್ದ ನನ್ನ ತಂದೆಗೆ ಇವರೆಲ್ಲಾ ಇತಿಹಾಸ ಪರಂಪರೆಯನ್ನು ಉಳಿಸಿ ಬೆಳೆಸುವ ಪ್ರಚಾರಕರಂತೆ ಕಂಡರು. ಇನ್ನು ಮುಂದೆ ಇವರ ಮಕ್ಕಳು ಆಧುನಿಕ ಬಲೆಯಲ್ಲಿ ಸಿಲುಕಿ ಅಮೂಲ್ಯ ಜ್ಞಾನ ನಿಧಿಯನ್ನು ಉಳಿಸುವರೋ ಇಲ್ಲವೋ ಎಂದೆನಿಸಿ ಎಲ್ಲಿ ಕಾಲ ಗರ್ಭದಲ್ಲೇ ಹುದುಗಿ ಹೋಗುತ್ತದೆಯೋ ಎಂದೆನಿಸಿ ಇವರ ಏಳಿಗೆ ಪುರೋಭಿವೃದ್ಧಿಗೆ ಮನಸೆಳೆಯಿತು. ಜಾನಪದರ ಗೀತೆಗಳು ಸಿರಿಗಂಧ. "ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ" ಎಂದು ಭೂಮಿ ತಾಯಿಯ

ನೆನೆದು ನೇಗಿಲು ಹೊತ್ತ ರೈತ ನಡೆದರೆ ಸಂಜೆ ಮನೆ ತಲುಪುವ ವೇಳೆಗೆ ನಾನಾ ವಿಧದ ಅನುಭವಗಳು, ರೀತಿ, ನೀತಿ, ಬಾಳು, ಬದುಕಿನ, ಸಾವು ನೋವಿನ ಹಾಸ್ಯ ಇವೆಲ್ಲದರ ಮಿಡಿತವೇ ಜನಪದರ ಸಾಹಿತ್ಯ, ಗಾದೆ, ಪದಗಳು.

ಮನೆಯನೆಂದು ಕಟ್ಟದ ಈ ಜಂಗಮ ಕಟ್ಟಿದ್ದು ಜಾನಪದ ಸಿರಿಯ ತವರುಮನೆ. ಕರುನಾಡಿನ ಜನತೆಗಿತ್ತ ದೊಡ್ಡ ಮನೆ, ಈ ಜಾನಪದ ಲೋಕ ಮೂವತ್ತು ನಲವತ್ತು ವರ್ಷದ ದೀರ್ಘ ದುಡಿಮೆ, ಚಿಂತನ, ಮಂಥನಗಳೆಲ್ಲದರ ಸಂಕಲನ ಇಲ್ಲಿ ಚಿರಾಯು. ಈ ಅದ್ವಿತೀಯ ಸಾಧನೆಯಿಂದ ಕಟ್ಟಿದ ಈ ಲೋಕ ಕರುನಾಡ ಜನತೆಗಿತ್ತ ಬಹು ದೊಡ್ಡ ಶ್ರೀಮಂತ ಕೊಡುಗೆ, ಹಾಗೇ ಈ ಚೇತನದ್ದೊಂದು ಶ್ರೀಮಂತ ಬದುಕು. "ಕಾಲಯ ತಸ್ಮೈ ನಮಃ" ಈ ಜಾಡಿನಲ್ಲಿ ಸಾಗಿ ಬಂದು ಕೊನೆ ಮುಟ್ಟುವಲ್ಲಿ ಇವರು ಪಟ್ಟ ಕಷ್ಟ ಒಂದೇ ಎರಡೇ. ಕಾಲ ಕೆಲವು ಜನರನ್ನು ಮಾತ್ರ ಮರೆಯುವಂತೆ ಮಾಡುತ್ತದೆ ಕೆಲವು ಜನರು ಕಾಲವನ್ನೇ ಮರೆಯುವಂತೆ ಮಾಡುತ್ತಾರೆ. ಇವರಿಗೆ ಸಮಯಕ್ಕಿದ್ದ ಬೆಲೆ ಅಪಾರ ಸರ್ಕಾರಿ ಸೇವೆಯಲ್ಲಿ ಇದ್ದ ಇವರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಹೋದಲ್ಲೆಲ್ಲಾ ತಮಗೆ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡರು. ಸಾಂಸ್ಕೃತಿಕ ಕಲೆ, ಜನಪದ ನೃತ್ಯ, ಹಾಡು, ಕುಣಿತ, ಎಲ್ಲ ಸಂಗ್ರಹಿಸಿ, ಸಂಕಲಿಸಿ, ಸಂಸ್ಕರಿಸಿ, ಈ ಕಲೆ ಪರಂಪರೆಗೆ ಒಂದು ದಿಕ್ಕು, ದೆಸೆ, ನೆಲೆ, ನಾಡು, ಸ್ಥಾನ, ಮಾನ ಮಾನ್ಯತೆ ಮನ್ನಣೆ, ಕಲ್ಪಿಸಿ ಕುಲವನ್ನೆ ಮರೆಯುವಂತೆ ಮಾಡಿದ್ದಾರೆ. ಈಗ ಹಸಿರಾಗಿ ಸುಂದರವಾಗಿ ಹೆಮ್ಮರವಾಗಿ ಬೆಳೆಯುತ್ತಿರುವ ಜಾನಪದ ಲೋಕದ ಜ್ಞಾನವೃಕ್ಷ ನನ್ನ ತಂದೆಯ ಕನಸಿನ ಕೂಸು. ಈ ಕನಸನ್ನು ನನಸಾಗಿಸಲು ಇವರ ತನು, ಮನ, ಧನವನ್ನೆಲ್ಲ ಧಾರೆಯೆರೆದಿದ್ದಾರೆ. ಒಂದು ಸಂಸ್ಥೆಯಾಗಲೀ, ಪರಿಷತ್ ಆಗಲಿ ಕಟ್ಟಿ ಬೆಳೆಸುವುದೇನೂ ಸುಲಭದ ಮಾತಲ್ಲ. ಭಗೀರಥ ಪ್ರಯತ್ನ ನಡೆಸಿದ್ದಾರೆ. ಇಲ್ಲಿ ಜ್ಞಾನ ಗಂಗೆಯ

ಮಡುವೆ ಇದೆ. ಎಷ್ಟು ಬೊಗಸೆ ಎತ್ತಿ ಕುಡಿದರೂ ದಾಹ ತೀರದ ಜಾನಪದ ಕಲೆ, ಇದನ್ನೆಲ್ಲ ಸಾಧಿಸಲು ಇವರಲ್ಲಿ ಅದಾವ ಶಕ್ತಿಯ ಪ್ರೇರಣೆ ಇತ್ತೊ ಅನಿಸುತ್ತದೆ. ಎಷ್ಟೋ ದಶಕಗಳ ಪರಿಶ್ರಮದ ಫಲ ಈ ಪೀಠ. ಯಾವುದೇ ಪ್ರಚಾರ, ಮಾನ್ಯತೆ, ಸುದ್ದಿಗಾಗಿ, ಬದುಕಲಿಲ್ಲ, ಬದುಕಿದ್ದು ಸಾಧಿಸಿದ್ದು ತಮ್ಮ ಆತ್ಮೋನ್ನತಿಗಾಗಿ, ಮನಶಾಂತಿಗಾಗಿ, ಮುಂಬರುವ ಪೀಳಿಗೆಗಾಗಿ. "ಜನಪದ ತಾನಾಗಿಯೇ ಉಳಿಯುವುದಿಲ್ಲ ಬೆಳೆಸಿ ಪೋಷಿಸಿದರೆ ಮಾತ್ರ ಉದ್ಧಾರವಾಗುವುದು. ನವಜಾನಪದ ಎನ್ನುವುದು ಬರುವುದಿಲ್ಲ ಹೊಸದಾಗಿ ಜಾನಪದ ಗೀತೆಗಳ ಸೃಷ್ಟಿ ಸಾಧ್ಯವೇ ಇಲ್ಲ, ಮೂವತ್ತು ನಲವತ್ತು ವರ್ಷದಿಂದ ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ ನನ್ನಿಂದಲೇ ಒಂದು ತ್ರಿಪದಿ ಬರೆಯಲು ಸಾಧ್ಯವಿಲ್ಲ ಅವೆಲ್ಲ ಸನ್ನಿವೇಶ, ಸಂದರ್ಭ, ಕಾಲ, ಕೆಲಸ ನೋಡಿ ಹಾಡುತ್ತಿದ್ದರು ಕುಣಿಯುತ್ತಿದ್ದರು. ಜಾನಪದ ಬರೀ ಅಕ್ಷರ ಜ್ಞಾನವಲ್ಲ ಅನುಭವ ಜ್ಞಾನ".

'ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ ಶಿಲೆಯಲ್ಲ ಈ ಗುಡಿಯ ಜಾನಪದ ಕಲೆಯು' ಕೊಂಬು ಕಹಳೆ ನಂದಿ ಧ್ವಜಗಳು. ಒಳಗೆ ಬಂದಲ್ಲಿ 'ಕಾಲಾಯ ತಸ್ಮೈ ನಮಃ' ಎಂದು ನಮಿಸಬೇಕು. ತಮ್ಮ ಇಳಿ ವಯಸ್ಸಿನಲ್ಲೂ ಎಲ್ಲಿ ಜಾತ್ರೆ, ಹಬ್ಬ, ಮೇಳ, ರಥೋತ್ಸವ ನಡೆದರೂ ತಯಾರಾಗಿ ಹೊರಟು ಬಿಡುತ್ತಿದ್ದರು. ಈ ಜಂಗಮ ಜರುಗಿದ ಜಾಡಲ್ಲೆಲ್ಲಾ ಜೋಳಿಗೆ ತುಂಬಿಸಿಕೊಂಡೇ ಬರುತ್ತಿದ್ದುದು. ಜನ ಜಂಗುಳಿಯಲ್ಲಿ ಬೆರೆತು, ಜಾತ್ರೆ ಉತ್ಸವಗಳಲ್ಲಿ ಕಲೆತು, ಹಾಡು ಕುಣಿತಗಳಲ್ಲಿ ಮೈ ಮರೆತು ಕಲಾವಿದರ ಭಿಕ್ಷೆಯಿಂದ ತುಂಬಿದ ಜೋಳಿಗೆ ಬರಿದಾಗುತ್ತಿದ್ದುದು ಲೋಕದಲ್ಲಿ. ಆ ಕಲೆಗಳೆನೋ ಒಂದೆ ಎರಡೇ. ಜಾನಪದ ಗೀತೆಗಳ ಸಾಹಿತ್ಯವನ್ನು ಬರೆದು ಧ್ವನಿ ಮುದ್ರಿಸಿ ಸಾವಿರಾರು ಗಂಟೆಗಳು ಕೇಳಬಹುದಾದಂತಹ ಜನಪದರ ಪದಗಳಿಗೆ. ವೈವಿಧ್ಯತೆಯಿಂದ

ಕೂಡಿದ ಕುಣಿತಗಳ ವಿಡಿಯೋ ಮುದ್ರಣ, ಧ್ವನಿ ಮುದ್ರಣ ಚಿತ್ರೀಕರಣ, ಪುರಾತನ ವಸ್ತು ಸಂಗ್ರಹಾಲಯ ಇಲ್ಲಿದೆ.

'ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ ಎಳ್ಳು ಜೀರಿಗೆ ಬೆಳೆಯೋಳ 'ಎಳ್ಳುಜೀರಿಗೆ ಬೆಳೆಯೋಳ ಭೂಮಿತಾಯಿಯ ಎದ್ದೊಂದು ಗಳಿಗೆ ನೆನೆದೇನು'. ಹೀಗೆ ಪ್ರಾರಂಭ ನೇಗಿಲ ಯೋಗಿಯ ಕಾಯಕ ಒಕ್ಕಲ ಮಕ್ಕಳ ಬದುಕು, ಭವಣೆ ಬಿತ್ತಿ ಬೆಳೆದವರ ಪಾಡು, ನಾಟಿ ಹಾಕುವಾಗ, ಕಳೆ ಕೀಳುವಾಗ, ಕುಟ್ಟಿ ಕೇರಿ ತೂರುವಾಗ, ಕಣ ಕಾಯುವಾಗ, ಬಂಡಿ ಹೊಡೆಯುವಾಗ ಹುಟ್ಟಿಕೊಳ್ಳುತ್ತಿದ್ದವು ಈ ಜನಪದ ಗೀತೆಗಳು. (ಕಲ್ಲವ್ವ ತಾಯಿ ಮೆಲ್ಲವ್ವ ರಾಗಿಯ ಜಲ್ಲಜಲ್ಲಾನೆ ಉದುರವ್ವ, ಜಲ್ಲಜಲ್ಲಾನೆ ಉದುರವ್ವ ನಾ ನಿನಗೆ ಬೆಲ್ಲದಾರತಿಯ ಬೆಳಗೇನು). ಇನ್ನು ಬೆಳಕು ಮೂಡದ ಆ ನಿಶಬ್ಧ, ನಿಶ್ಚಲ, ವಾತಾವರಣದಲ್ಲಿ ಗರ್ ಎಂದು ಬೀಸುವ ರಾಗಿ ಕಲ್ಲಿನ ಸದ್ದಿನ ಜೊತೆ ಬೀಸುವವರ ದನಿ ಸೇರಿಸಿ ಹಾಡುತ್ತಿದ್ದು ನಾನು ಚಿಕ್ಕವಳಿದ್ದಾಗ ನಸುಕಿನಲ್ಲೇ ಕೇಳಿದ ಈ ಪದಗಳು ಮನಸ್ಸಿನಲ್ಲಿ ಅಚ್ಚೊತ್ತಿದೆ. ಹಳ್ಳಿಗಾಡಿನ ಜನರ ನಡೆ, ನುಡಿ ದುಃಖ ದುಮ್ಮಾನ, ನೋವು ನಲಿವು, ದುಡಿತ, ಮಿಡಿತದ ಸಂವೇದನೆ ಅನಿಸಿಕೆಗಳನ್ನು ತಮ್ಮದೇ ಆದ ದನಿ ಧಾಟಿ ಪದಗಳಲ್ಲಿ ಹೇಳಿಕೊಂಡು ಮೆರೆದವರು ನಮ್ಮ ಪೂರ್ವಜರು. ಈ ಸಂಸ್ಕೃತಿ ನಮ್ಮ ತಾಯಿ ಬೇರು ಇವರದು ಸರಳ ಸಾತ್ವಿಕ ಬದುಕು. ಒಬ್ಬರಿಂದ ಇನ್ನೊಬ್ಬರು ಕಲಿತು ಅವರ ಸ್ಮರಣ ಶಕ್ತಿಯಲ್ಲಿರಿಸಿಕೊಂಡು ಅವರದೇ ಆದ ರೀತಿ ನೀತಿ, ಮೌಲ್ಯಗಳಿಗೆ ತಮ್ಮನ್ನು ತೊಡಗಿಸಿಕೊಂಡು ಜೀವನದ ಕಾಯಕವನ್ನು ಸಾಗಿಸಿದವರು. ಜನಪದ ಸಂಸ್ಕೃತಿಯಲ್ಲಿ ಬದುಕಿನ ವಿಸ್ತಾರತೆಯ ಈ ಕಲಾವಿದರ ಪುರೋಭಿವೃದ್ಧಿಗೆ ಶ್ರಮಿಸಲು ತೊಡಗಿದರು.

'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ, ಹರಿಯ ಕರುಣದೊಳಾದ ಭಾಗ್ಯವ ಹರಿ ಸಮರ್ಪಣೆ ಮಾಡಿ ಬದುಕಿರೋ' ಎಂಬ ದಾಸರ ಪದದಂತೆ ಈ ಆಧುನಿಕ ಸಮಾಜಕ್ಕೊಂದು ಹಿರಿ, ಸಿರಿ,

ಪುರಾತನ ಸಂಸ್ಕೃತಿಯ ಅನುಪಮ ಕೊಡುಗೆ ಈ ಜೋಗಿಯದು. ಸಮಾಜ ನಮಗೆ ಏನು ಕೊಟ್ಟಿದೆ ಎನ್ನುವುದಕ್ಕಿಂತ ನಾವು ಸಮಾಜಕ್ಕೆ ಏನು ಕೊಟ್ಟಿದ್ದೇವೆ ಎಂದು ಯೋಚಿಸುವುದು ಮುಖ್ಯ.

ಅಧಿಕಾರ ಅವಧಿಯಲ್ಲಿ ಸಾತ್ವಿಕ ದರ್ಪದ ಜೀವನ ನಡೆಸಿದವರು ಕೊನೆಯಲ್ಲಿ ಬಹಳ ಸರಳ ಜೀವನ ಶೈಲಿಗೆ ಒಗ್ಗುತ್ತಾ ಬಂದರು. ಉನ್ನತ ಧ್ಯೇಯ, ಸಕಾರಾತ್ಮಕ ಚಿಂತನೆ. ಮನೆಯಲ್ಲೊಂದು ಸಣ್ಣ ಕೋಣೆಯೇ ಇವರ ಕಾರ್ಯಾಲಯ ಮತ್ತು ಇವರು ಮಲಗುವ ಕೋಣೆ. ಇಲ್ಲಿ ಯಾವುದೇ ಆಡಂಬರವಿಲ್ಲ, ಅಂದವಿಲ್ಲ, ಚಂದವಿಲ್ಲ. ಆದರೆ ಇಲ್ಲಿ ಆರಾಧಿಸುತ್ತಿದ್ದ ತಾಯಿ ಸರಸತಿಯ ಪೂಜೆ ಸೇವೆ ಮಾತ್ರ ಕೊನೆಯ ಉಸಿರಿರುವವರೆಗೂ ಹಗಲಿರುಳೆನ್ನದೇ ಸಾಗುತ್ತಿದ್ದವು.

ಎಂತಹ ಆರ್ಥಿಕ ಮುಗ್ಗಟ್ಟಿನಲ್ಲೂ ತಮ್ಮದೇ ಆದ ಧ್ಯೇಯ, ದೃಢತೆ, ಸತ್ಯಪಾಲನೆ, ಶಿಸ್ತು, ಮಾನವೀಯತೆಯನ್ನು ಮೈಗೂಡಿಸಿಕೊಂಡಿದ್ದರು. ಕೊನೆಕೊನೆಯಲ್ಲಂತೂ ನನ್ನ ತಾಯಿಯ ಆರ್ಥಿಕ, ಸಾಂಸಾರಿಕ ಕಷ್ಟಗಳೇನಾದರೂ ಹೇಳಿಕೊಂಡಲ್ಲಿ ಅದು ಅವರ ಮೇಲೆ ಯಾವ ಪರಿಣಾಮವನ್ನು ಬೀರುತ್ತಿರಲಿಲ್ಲ. ಸಂಸಾರದಲ್ಲಿದ್ದು ತಾವರೆ ಎಲೆಯ ಮೇಲಿನ ನೀರಿನಂತೆ ಅಂಟಿಕೊಳ್ಳದೇ ಸ್ಥಿತ ಪ್ರಜ್ಞನಂತಿದ್ದು ಬಿಡುತ್ತಿದ್ದರು. ನನ್ನ ಪ್ರೀತಿಯ ತಮ್ಮ ನಂಜರಾಜ್ 2001 ಫೆಬ್ರವರಿಯಲ್ಲಿ ಕಾಲವಶವಾದನು. ಈ ಇಳಿ ವಯಸ್ಸಿನಲ್ಲಿ ಬಂದ ಪುತ್ರ ವಿಯೋಗದ ಶೋಕ ಇವರ ಮನಸ್ಸಿಗೆ ಇನ್ನಿಲ್ಲದ ಘಾಸಿ ಉಂಟು ಮಾಡಿತು. ಯಾವುದೆ ದುಃಖವನ್ನರಿಯದ ಈ ಜೀವಕ್ಕೆ ಬಹಳ ದೊಡ್ಡ ಸಿಡಿಲೆರಗಿದಂತಾಯಿತು.

ಒಮ್ಮೆ ಶ್ರೀ ಕ್ಷೇತ್ರಕ್ಕೆ ಹೋಗಿ ಶ್ರೀ ಶ್ರೀ ಶ್ರೀ. ಬಾಲಗಂಗಾಧರನಾಥ ಸ್ವಾಮಿ ದರ್ಶನಕ್ಕೆ ಹೋದಾಗ 'ಹೇಗಿದ್ದಾರಮ್ಮ ನಿಮ್ಮ ತಂದೆಯವರು, ಸ್ಥಿತ ಪ್ರಾಜ್ಞನಂತ ಮನುಷ್ಯ ಅವರು ಕಣ್ಣೀರಿಟ್ಟಿದ್ದನ್ನು ನಾನು ಯಾವಾಗಲೂ ನೋಡಿರಲಿಲ್ಲ. ಅದರೆ ವಿಧಿಯ ಆಟದ ಮುಂದೆ ನಾವೆಲ್ಲ ಅಲ್ಪರು. ಈ

ಪುತ್ರ ಶೋಕಕ್ಕೆ ಸಿಲುಕಿದವರು ನೋವು ಅಸಾಧ್ಯ. ಆದರೂ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಆ ದೇವರು ಕೊಡಲಿ, ವಿಧಿಯ ನಿಯಮಕ್ಕೆ ನಾವೆಲ್ಲರೂ ತಲೆ ಬಾಗಲೆ ಬೇಕು' ಎಂದು ಸಾಂತ್ವನ ಹೇಳಿದರು. ಯಾವ ಕಷ್ಟಕ್ಕೂ ಕುಗ್ಗದೇ, ಜಗ್ಗದೇ ಸುಖದಲ್ಲಿ ಹಿಗ್ಗದೇ ಒಂದೇ ಸಮ ಸ್ಥಿತಿಯಲ್ಲಿ ತನ್ನ ಪ್ರಜ್ಞೆಯನ್ನು ನಡೆಸಿಕೊಂಡವನೇ ಸ್ಥಿತ ಪ್ರಜ್ಞ, ಆದರೆ ಈ ಬದುಕಿನ ಬಂಡಿ ಮುಂದೆ ಸಾಗಲೇ ಬೇಕಲ್ಲ..... ಆ ಭರಿಸಲಾರದ ದುಃಖದಲ್ಲೂ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಮುಂದೆ ಸಾಗಿತು ಜೀವನ. ಕಾಲಕ್ಕೆ ಸರಿಯಾಗಿ ಊಟ ಉಪಚಾರವಾಗುತ್ತಿದ್ದರೆ ಸಾಕು ತಮ್ಮ ಬರವಣಿಗೆ ಯಾಯಿತು, ಜಾನಪದಲೋಕವಾಯಿತು. ಅರವತ್ನಾಲ್ಕು ವರ್ಷಗಳ ಅವರ ದಾಂಪತ್ಯ ಸಹ ಜೀವನ ನಮ್ಮೆಲ್ಲರಿಗೂ ಆಸರೆಯ ಗಣಿಯಾಗಿತ್ತು. ನನ್ನ ತಾಯಿ ಮುಂಚಿನಿಂದಲೂ ನನ್ನ ತಂದೆಯ ಅಂತರ್ಮುಖತೆಯನ್ನು ಅರಿತ ಇವರು ತನ್ನ ಮಕ್ಕಳನ್ನು ಕೊನೆಯವರೆಗೂ ಕೋಳಿ ತನ್ನ ಮರಿಗಳನ್ನು ರೆಕ್ಕೆ ಒಳಗೆ ಮುಚ್ಚಿಟ್ಟುಕೊಂಡಂತೆ ತಮ್ಮ ಪ್ರೀತಿ, ಒಳವನ್ನು ತೋರಿಸಿ ಆದರಿಸುತ್ತಿದ್ದರು. ನಮ್ಮ ತಂದೆ ಮೂರು ವರ್ಷದವರಿದ್ದಾಗಲೆ ತಾಯಿಯನ್ನು ಕಳೆದುಕೊಂಡಿದ್ದರಿಂದಲೋ ಏನೋ ನಮ್ಮನ್ನೆಲ್ಲ ಅವ್ವ, ಅಮ್ಮ, ಎಂದೆ ಕರೆಯುತ್ತಿದ್ದರು ಮನೆಗೆ ಹೋದಾಗಲೆಲ್ಲಾ 'ಬಾ ಊಟ ಮಾಡು', 'ಹೊಸ ಪುಸ್ತಕ ಬಂದಿದೆ ಓದು', ಹೀಗೆ ನಾಲ್ಕಾರು ಮಾತಾಡಿದಲ್ಲಿ ಮುಗಿಯಿತು. ಅವ್ವ ಎಂದು ಕರೆದಾಗಲೆಲ್ಲ ಮಮತೆಯ ಕರೆಯಲ್ಲಿ ನನ್ನ ತಾಯಿ ತೋರುತ್ತಿದ್ದ ಪ್ರೀತಿಗಿಂತಲೂ ಹೆಚ್ಚಿನ ವಾತ್ಸಲ್ಯ ಮಮತೆ ತುಂಬಿ ತುಳುಕುತ್ತಿತ್ತು. ಪ್ರತಿ ನಿತ್ಯ ನಾವು ಒಂದಿಲ್ಲೊಂದು ಘಟನೆ, ಸನ್ನಿವೇಶ, ಅದರಲ್ಲಿ ಹುದುಗಿರುವ ಸಂದೇಶವನ್ನು ಗ್ರಹಿಸಿಕೊಂಡು ಬದುಕಿನಲ್ಲಿ ಅಳವಡಿಸಿ ಕೊಂಡು ಜೀವನ ಸಾಗಿದಂತೆ ಸಾಗಬೇಕು. ನಾವು ಬಯಸುವುದೇ ಒಂದು, ಆದರೆ ಜೀವನ ನಮ್ಮಿಂದ ಬಯಸುವುದೇ ಒಂದು. ನಾವು ನೆನೆವುದೇ ಆಶಿಸುವುದೇ ಒಂದು, ಆಗುವುದೇ ಇನ್ನೊಂದು. ಎತ್ತ

ಸಾಗುತ್ತಿದ್ದೇವೆಂದು ನಮಗೆ ತಿಳಿದಿರುವುದಿಲ್ಲ, ನಾವು ಏನನ್ನು ಜೀವನದಲ್ಲಿ ಅರಸುತ್ತೇವೋ ಅದು ಸಿಗುವುದಿಲ್ಲ. ಜೀವನವೊಂದು ಪಯಣವೆಂದು ಪರಿಗಣಿಸಿ ಒಳ್ಳೆಯದನ್ನು ಆರಿಸಿ ಹೆಕ್ಕಿಕೊಂಡು ಜೀವನ ನಡೆಸಿದಂತೆ ನಡೆಯಬೇಕೇ ಹೊರತು ನಮ್ಮ ಎಣಿಕೆಯಂತೆ ಜೀವನ ಸಾಗದು.

ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆಯುವ ಜಾನಪದ ಮೇಳಕ್ಕೆ ಹೊರಡಲು ಎಲ್ಲ ತಯಾರಿ ನಡೆದಿತ್ತು. ಅದರೆ ಜೀವಾತ್ಮನ ಪಯಣ ದೇಹವನ್ನೇ ಬಿಡುವ ತಯಾರಿಯಲ್ಲಿತ್ತು. 'ಪ್ರವಾಸಿ ಕಂಡ ಇಂಡಿಯಾ' ಒಂಭತ್ತನೇ ಸಂಪುಟದ ತಿದ್ದುಪಡಿಯನ್ನು ನೋಡುತ್ತಿದ್ದರು. 21 ಸೆಪ್ಟೆಂಬರ್ ಸಂಜೆ 7.00 ಗಂಟೆ ಸಮಯ. ಸಿಗರೇಟು ಸೇದುವ ಅಭ್ಯಾಸವಿದ್ದ ಇವರು ನನ್ನ ತಾಯಿಯ ಕಣ್ಣು ತಪ್ಪಿಸಿ ಹೊರಗೆ ಬಂದು ಸೇದುತ್ತಿದ್ದರು, ಮನೆಯ ಆಚೆ ಅಡ್ಡಾಡುತ್ತಿದ್ದವರು ಹಾಗೇ ಕುಸಿದು ಬಿದ್ದಿದ್ದರು. 91ರ ಹರೆಯದ ಪವಿತ್ರಾತ್ಮ ಯಾವ ನೋವು ಸದ್ದು ಗದ್ದಲವಿಲ್ಲದೇ ಪರಮಾತ್ಮನ ಅನಂತತೆಯಲ್ಲಿ ಲೀನವಾಗಿ ಹೋಗಿತ್ತು. ಪಂಚಭೂತಗಳಿಂದಾದ ಈ ಶರೀರವನ್ನು ತೊರೆದು ಪ್ರಕೃತಿಯ ಪಂಚಮಹಾಭೂತಗಳಲ್ಲಿ ಲೀನವಾಯಿತು. ದೇಹಕ್ಕೆ ಅಳಿವುಂಟು ಆತ್ಮಕ್ಕೆ ಅಳಿವಿಲ್ಲ. ಆದರೆ ಈ ಜೀವಾತ್ಮನ ಸಾಧನೆ ಅಪ್ರತಿಮ ಹಾಗೂ ಚಾರಿತ್ರಿಕ. ಜಾನಪದ ಹೆದ್ದಾರಿಯಲ್ಲೊಂದು ಮಹತ್ವಪೂರ್ಣ ಮೈಲಿಗಲ್ಲನ್ನು ನೆಟ್ಟ ಕೀರ್ತಿ ಇವರದು. ಕನ್ನಡ ಸಾಹಿತ್ಯ ಮತ್ತು ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಕನ್ನಡ ಸಾರಸ್ವತ ಲೋಕದ ಹಿರಿಯರಲ್ಲಿ ಒಬ್ಬರಾದರು, ಕಾಲದ ಏರಿಳಿತದಲ್ಲಿ ಇದೆಲ್ಲ ನಶಿಸಿ ಹೋಗಿದೆ. ಈ ಸಂಸ್ಕೃತಿ ಸಂಪತ್ತು ನಮ್ಮೆಲ್ಲರ ಸ್ವತ್ತು. ಅದರ ಪ್ರಾಚ್ಯತೆ ಮೌಲ್ಯಕ್ಕಾಗಿಯಾದರು ರಕ್ಷಿಸಿ ಕಾಪಾಡುವ ಮನಸ್ಸಿರಬೇಕು. ನಿತ್ಯ ನಿತ್ಯ ಅನುಭವಿಸುವ ಅನುಭವಗಳು ತತ್ವ ಸತ್ಯಗಳು. ಒಬ್ಬ ವ್ಯಕ್ತಿ ತನ್ನ ಜೀವಿತದ ಅವಧಿಯಲ್ಲಿ ಇಷ್ಟೆಲ್ಲಾ ಸಾಧಿಸಲು ಸಾಧ್ಯವೇ ಎಂದು


ಮಾಡಿ ತೋರಿಸಿದ್ದಾರೆ. ಜಾನಪದವೇ ಇವರ ಆದಿ, ನಾಂದಿ, ಅಂತ್ಯ, ಅನಂತವಾಯಿತು.

ಆಧುನಿಕ ಏಕತಾನತೆಯಿಂದ ಸೋತ ಯುವ ಪೀಳಿಗೆ ಈ ಜಾನಪದ ಜಾತ್ರೆಯ ಸೊಬಗು ಸೊಗಡಿಗೀಗ ಮರೆ ಹೋಗಿ ಮರಳಿ ಬರುತ್ತಿದ್ದಾರೆ. ಇದು ಹಳೆ ಚಿನ್ನದ ಒಡವೆ. ಇದರ ಆಧುನಿಕತೆಯಾಗಲಿ ನಕಲಾಗಲಿ ಮಾಡಲಾಗುವುದಿಲ್ಲ. ತಾನು ನೆಟ್ಟ ಮರ ಬೃಹದಾಕಾರವಾಗಿ ಬೆಳೆದ ಅದರ ಹಣ್ಣಿನ ಸವಿಸ್ವಾದವನ್ನು ಅನುಭವಿಸಿ ಆನಂದಿಸುವುದನ್ನು ನೋಡಿದರೆ ಆ ಆತ್ಮಕ್ಕೆ ಶಾಂತಿ ನೆಮ್ಮದಿ ಸಾರ್ಥಕತೆ ಸಿಕ್ಕಂತೆ.

ಸುವರ್ಣ ಕರ್ನಾಟಕ ವರ್ಷಾಚರಣೆಯ ಹಿನ್ನೆಲ್ಲೆಯಲ್ಲಿ ಜಾನಪದಕ್ಕೆ ಈಗ ರಾಜಾಶ್ರಯ, ರಾಜಯೋಗ, ತಾಯಿ ಕನ್ನಡಾಂಬೆಗೂ ಇಲ್ಲಿ ನಿತ್ಯೋತ್ಸವ.

ಇನ್ನು ನೂರಾರನ್ನು ಸಾಧಿಸುವ ಯೋಚನೆ, ಆಲೋಚನೆ, ಆಶೆ ಬಹಳ ಇತ್ತು. ಆದರೆ ನೊಂದ ಶರೀರ ಈ ಆಶೆಯ ಆತ್ಮವನ್ನು ಒಳಗಿರಲು ಅವಕಾಶ ಕೊಡಲಿಲ್ಲ. ನನ್ನ ತಂದೆಯವರು ತೀರಿಕೊಂಡ ಮೇಲೆ ಹನ್ನೊಂದನೆ ದಿನದವರೆಗೂ ಅವರ ಭಾವಚಿತ್ರದ ಮುಂದೆ ಒಂದು ದೀಪವನ್ನು ಹಚ್ಚಿಡುವುದು ವಾಡಿಕೆ. ಅವರ ಆತ್ಮ, ಜ್ಯೋತಿ ರೂಪದಲ್ಲಿದೆ ಎಂದು. ಹನ್ನೊಂದನೇ ದಿನದ ಸಂಸ್ಕಾರಗಳೆಲ್ಲ ಕಳೆದ ನಂತರ ಆ ಜ್ಯೋತಿಯನ್ನು ಅದೇ ಆಗಿ ನಂದಲು ಬಿಡುತ್ತಾರೆ. ಇಲ್ಲಿ ಒಂದು ಸೋಜಿಗವೆಂದರೆ ಆ ಜ್ಯೋತಿ ಎಣ್ಣೆ ಪೂರ್ತಿ ಬತ್ತಿ ಹೋಗಿದ್ದರು, ಬಹಳ ಗಂಟೆಗಳ ಕಾಲ ಉರಿಯುತ್ತಲೆ ಇತ್ತು. ಆ ಜ್ಯೋತಿ ಅವರ ಜೀವನದ ಸಾಕ್ಷಾತ್ಕಾರವನ್ನೂ, ಕೊನೆಯ ಗಳಿಗೆಯವರೆಗೂ ಹೇಗೆ ನನ್ನ ಬದುಕನ್ನು ಸಾರ್ಥಕಪಡಿಸಿಕೊಂಡಿದ್ದೇನೆ ಎಂದು ಸಾರುತ್ತಿತ್ತು. ಇಲ್ಲಿಂದ ಮುಂದೆಯೂ ನನ್ನ ಕಾಯಕವನ್ನು ನಾನು ಮುಂದುವರಿಸಿಕೊಂಡು ಹೋಗುತ್ತಿದ್ದೇನೆ

ಎನ್ನುವ ಭಾವನೆ ಬರುತ್ತಿತ್ತು. ಆ ಆತ್ಮಜ್ಯೋತಿ ಸಾಗುವ ಸ್ವರ್ಗದ ಹಾದಿಯಲ್ಲೂ ಜನಪದರನ್ನು ಕಲೆ ಹಾಕಿ ಅಲ್ಲಿಯೂ ಒಂದು ಜಾನಪದ ಲೋಕವನ್ನು ಸೃಷ್ಟಿ ಮಾಡುವ ಸಿದ್ಧತೆ ಇದೆಯೇನೋ ಎನ್ನಿಸುತ್ತಿತ್ತು ನನಗೆ. ಅವರು ಸಶರೀರಿಯಾಗಿ ಇಲ್ಲದಿದ್ದರೇನು ಅವರ ಆತ್ಮ ಜನಪದರ ಹಾಗೂ ಜಾನಪದ ಲೋಕದ ಕಣಕಣದಲ್ಲೂ ಮೆರೆಯುತ್ತಿದೆ. ತಾಯಿ ಶಾರದೆಗೆ ಇದನ್ನು ಗುಡಿಯಾಗಿಸಿ ಅವಳ ಮಕುಟದ ರತ್ನವಾಗಿ ಮೆರೆದ ಅವರ ವ್ಯಕ್ತಿತ್ವದ ವಿಕಸನಕ್ಕೆ ಅವರೇ ರೂವಾರಿ. ಒಬ್ಬ ವ್ಯಕ್ತಿಯು ಆಡಳಿತ, ಸಾಹಿತ್ಯ, ಜಾನಪದ ಮುಂತಾದ ಕ್ಷೇತ್ರದಲ್ಲಿ ಏನ್ನೆಲ್ಲ ಸಾಧಿಸಬಹುದು ಎಂಬುದಕ್ಕೆ ನಿದರ್ಶನವಾಗಿದ್ದಾರೆ. ತಮ್ಮ ಅವಿರತ ಶ್ರಮ, ನಿಷ್ಠೆಗಳಿಂದ ಇವೆಲ್ಲವನ್ನು ಸಾಧಿಸಲು ಆ ಮಹಾಚೇತನದ ಹಿಂದೆ ಆದಾವ ದಿವ್ಯ ಶಕ್ತಿ ಅಡಗಿತ್ತೋ ಅಥವಾ ಆ ತಾಯಿ ಸರಸ್ವತಿಯೆ ಕೈ ಹಿಡಿದು ನಡೆಸಿದಳೇನೋ ಎನ್ನಿಸುತ್ತದೆ. ಆ ಪರಮ ಜ್ಯೋತಿಯಂತೆ ಹಿರಿಯ ಚೇತನವಾದ ನನ್ನ ತಂದೆಯ ಬಾಳು ಕೊನೆಯ ಉಸಿರು ಇರುವವರೆಗೂ ಸಿರಿಗಂಧವಾಗಿ ತೇಯ್ದು, ತನ್ನ ಕಂಪನ್ನು ಬೀರಿ ಅಮರರಾದ ಮಹ ಚೈತನ್ಯಕ್ಕೆ ನನ್ನ ನೆನಪಿನ ಕಿರು ಸೊಡರನ್ನು ಬೆಳಗುವೆ.




**ಕರ್ನಾಟಕ ಜಾನಪದ ಪರಿಷತ್ತು**

**ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ**

**ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೬೦**

E-mail : janapadaparishath@hotmail.com